# ನೇಸರು

## ತಿಂಗಳೋಲೆ

₹ 5/-

PAGES 20

NOVEMBER 2023 Nesaru Tingalole Vol. XLI - 11



**ಎಲ್ಲಾದರೂ ಇರು**

**ಎಂತಾದರೂ ಇರು**

**ಎಂದೆಂದಿಗೂ ನೀ ಕನ್ನಡವಾಗಿರು**





ಕುಲ ಕುಲವೆಂದು
ಹೊಡೆದಾಡಬೇಡಿ
ಸಾಯ ಬೇಡಿರಿ
ಹುಚ್ಚಪ್ಪಗಳಿರಾ
ಆತ್ಮ ಯಾವ ಕುಲ?
ಜೀವ ಯಾವ ಕುಲ?
ಗಾಳಿ ಯಾವ ಕುಲ?
ನೀರು ಯಾವ ಕುಲ?
ಅನ್ನ ಯಾವ ಕುಲ?

–ಕನಕದಾಸ

**ಸಮಸ್ತ ಕನ್ನಡ ಜನರಿಗೆ ರಾಜ್ಯೋತ್ಸವ, ದೀಪಾವಳಿ ಹಾಗೂ ಕನಕ ಜಯಂತಿಯ ನಲು ಹಾರೈಕೆಗಳು**

**ಮೈಸೂರು ಅಸೋಸಿಯೇಷನ್ ಮುಂಬೈ**

**THE MYSORE ASSOCIATION, BOMBAY**

393, Bhau Daji Road, Matunga, Mumbai - 400 019. | Tel.: 2403 7065
Email : mysoreassociation.mumbai@gmail.com

# 50ನೇ ವಾರ್ಷಿಕ ವಿವಾಹ ದಿನದ ಶುಭಾಶಯಗಳು



ಅಸೋಸಿಯೇಷನ್ ಗೆಳೆಯರಿಗೆಲ್ಲಾ "ಎಚ್ವಾರೆಲ್" ಎಂದು ಪರಿಚಯವಿರುವ ಹೊಳಲ್ಕೆರೆ ವೆಂಕಟೇಶ್ ಮತ್ತು ಅವರ ಪತ್ನಿ ಶ್ರೀಮತಿ ಸರೋಜಾ ವೆಂಕಟೇಶ್ ಮೈಸೂರು ಅಸೋಸಿಯೇಷನ್‌ನ ಅಜೀವ ಸದಸ್ಯರು ವೆಂಕಟೇಶ್, ಮಾತುಂಗದಲ್ಲಿಯೇ ಇರುವ ಹತ್ತಿ ಸಂಶೋಧನಾಲಯದಲ್ಲಿ ಟೆಕ್ನಿಕಲ್ ಆಫೀಸರ್ ಆಗಿ ಕೆಲಸ ಮಾಡುತ್ತಿದ್ದು ವರ್ಷ 2004ರಲ್ಲಿ ನಿವೃತ್ತರಾದರು. ಸಾಯಂಕಾಲ ಮೈಸೂರು ಅಸೋಸಿಯೇಷನ್‌ಗೆ ಬಂದು ಟೇಬಲ್ ಟೆನ್ನಿಸ್ ಆಟ ಆಡುತ್ತಿದ್ದರು. ಶ್ರೀ. ಭಟ್ರವರು ಲೈಬ್ರರಿಯನ್ನು ನೋಡಿಕೊಳ್ಳುತ್ತಿದ್ದಾಗ ಅವರ ಜತೆ ನೇರವಾಗಿ ಸ್ವಲ್ಪ ಸಮಯ ಜೊತೆಯಲ್ಲಿ ಕೆಲಸ ಮಾಡುತ್ತಿದ್ದರು. ಅಸೋಸಿಯೇಷನ್ ಆಯೋಜಿಸಿದ ದತ್ತಿ ಉಪನ್ಯಾಸಗಳು ಮತ್ತು ಸಂಗೀತ ನಾಟಕ ಕಾರ್ಯಕ್ರಮಗಳನ್ನು ಒಬ್ಬ ನೋಡುಗನಾಗಿ ಗುರುತಿಸಿ ಕೊಂಡಿದ್ದಾರೆ. ವಿಕಿಪೀಡಿಯ ಸಂಸ್ಥೆಯಲ್ಲಿ ಕೆಲಸದಲ್ಲಿ ನಿರತರಾಗಿ ಸುಮಾರು ಒಂದು ಸಾವಿರಕ್ಕಿಂತ ಹೆಚ್ಚಿಗೆ ಲೇಖನಗಳನ್ನು ಬರೆದಿರುತ್ತಾರೆ. ಫೇಸ್‌ಬುಕ್, ಇನ್ಸ್ಟಾಗ್ರಾಂ ಮತ್ತು ಅನೇಕ ಬ್ಲಾಗ್‌ಗಳಲ್ಲಿ ನಿರತರಾಗಿದ್ದಾರೆ. ಫೋಟೋಗ್ರಾಫಿ ಇವರಿಗೆ ಪ್ರಿಯವಾದ ವಿಷಯಗಳಲ್ಲೊಂದು. ಅಸೋಸಿಯೇಷನ್ ಹಲವಾರು ಕಾರ್ಯಕ್ರಮಗಳನ್ನು ಕವರ್ ಮಾಡಿದ್ದಾರೆ. ಸಂಪದ. ನೆಟ್, ನಸುಕು. ಕಾಂ ಅನೇಕ ಪತ್ರಿಕೆಗಳಲ್ಲಿ ಲೇಖನಗಳನ್ನು ಬರೆದು ಪ್ರಕಟಿಸಿರುತ್ತಾರೆ.





ಶ್ರೀ. ವೆಂಕಟೇಶ್ ಗೂಚಿ. ಸೌ. ಸರೋಜಾ, ಚಿತ್ರದುರ್ಗದಲ್ಲಿ 10, ಜೂನ್, 1973ರಲ್ಲಿ ಮದುವೆಯಾದರು. ಈ ದಂಪತಿಗಳಿಗೆ ಇಬ್ಬರು ಗಂಡು ಮಕ್ಕಳು. ಹಿರಿಯ ಮಗ ರವೀಂದ್ರ, ಮುಂಬಯಿನ ಐಟಿ ಕಂಪೆನಿಯೊಂದರಲ್ಲಿ ಪ್ರಾಜೆಕ್ ಮೇನೇಜರ್ ಆಗಿ ಕೆಲಸ ಮಾಡುತ್ತಿದ್ದಾರೆ. ಎರಡನೆಯ ಮಗ, ಪ್ರಕಾಶ್, ಅಮೇರಿಕಾದ ಸ್ಯಾಂಡಿಯಾಗೊ ನಗರದಲ್ಲಿ ಖಾಸಗಿ ಕಂಪೆನಿಯೊಂದರಲ್ಲಿ ಉನ್ನತ ಹುದ್ದೆಯಲ್ಲಿ ಕೆಲಸದಲ್ಲಿದ್ದಾರೆ.

**ಈ ದಂಪತಿಗೆ ಅವರ ವಿವಾಹದ ಸುವರ್ಣ ವಾರ್ಷಿಕೋತ್ಸವಕ್ಕೆ ಹಾರ್ದಿಕ ಶುಭಾಶಯಗಳು.**

ಗೌ. ಸಂಪಾದಕರು
ಡಾ. ಜ್ಯೋತಿ ಸತೀಶ್
***

ಸಂಪಾದಕ ಮಂಡಳಿ:
ಡಾ. ಮಂಜುನಾಥ್
ಕೆ. ಮಂಜುನಾಥಯ್ಯ
ನಾರಾಯಣ ನವಿಲೇಕರ್
ಗಣಪತಿ ಶಂಕರಲಿಂಗ
ನೀಲಕಂಠ
***

ಬೆಂಗಳೂರು ಪ್ರತಿನಿಧಿ
ಎಂ. ಎ. ಎಸ್. ಪ್ರಸಾದ್
***

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ.
– ಸಂ.

The views expressed by the contributors in this journal are theirs and not of the Association and the Association is not in anyway responsible for the same.
- Ed.
****

ಸಂಪರ್ಕ ವಿಳಾಸ:
ನೇಸರು
ಮೈಸೂರು ಅಸೋಸಿಯೇಷನ್
393, ಭಾವು ದಾಜಿ ರಸ್ತೆ, ಮಾಟುಂಗ
ಮುಂಬಯಿ – 400 019.
✆ 24037065
Email:
mysoreassociation.mumbai@gmail.com
Website:
www.mysoreassociation.in

ನೇಸರು ತಿಂಗಳೋಲೆ
ಸಂಪುಟ -41 | ನವೆಂಬರ್- 2023 | ಸಂಚಿಕೆ-11

# ಶ್ರಮಸಂಸ್ಕೃತಿ



**✍ ಡಾ. ಜ್ಯೋತಿ ಸತೀಶ್**

ನಾವೆಲ್ಲರೂ ನಮ್ಮ ನಮ್ಮ ಜೀವನವನ್ನು ಸಿಂಹಾವಲೋಕನ ಮಾಡಿದಾಗ, ಮುಖ್ಯವಾಗಿ ನಮ್ಮೆಲ್ಲರನ್ನು ಕಾಡುವುದು ನಮ್ಮೆಲ್ಲರ ಬಾಲ್ಯದ ದಿನಗಳು. ಹೇಗಿದ್ದವು ಆ ದಿನಗಳು. ಇಂದಿಗೂ ಆ ದಿನಗಳನ್ನು ನೆನೆಸಿಕೊಂಡಾಗಲೆಲ್ಲ ಮೈ ರೋಮಾಂಚನಗೊಳ್ಳುವುದು ಸಹಜ. ಆಡಿದ ಆಟಗಳಾಗಿರಬಹುದು, ಮಾಡಿದ ಮಸ್ತಿಯಾಗಿರಬಹುದು, ಚಿಕ್ಕ ಚಿಕ್ಕ ಕೋಪ, ಮುನಿಸು ಇವೆಲ್ಲವನ್ನ ನೆನಸಿಕೊಂಡಾಗಲೆಲ್ಲ, ಮನಸ್ಸಿಗೆ ಮುದವನ್ನು ನೀಡುತ್ತವೆ. ನಾವು ಕೇವಲ ಓದನ್ನೇ ಹಚ್ಚಿಕೊಂಡವರಲ್ಲ. ಓದಿನೊಂದಿಗೆ ಮನೆಕೆಲಸ ಆಗಿರಬಹುದು, ಮನೆಯ ಬೇಸಾಯವಾಗಿರಬಹುದು ಅದಕ್ಕೆಲ್ಲ ಕೈಜೋಡಿಸುತ್ತಿದ್ದವು. ಪ್ರತಿಯೊಂದು ಕೆಲಸದಲ್ಲೂ ಮರೆಯಲಾಗದ ನೆನಪುಗಳ ಬುತ್ತಿ ಇದೆ ನಮ್ಮೊಳಗೆ. ಮೊದಲೆಲ್ಲ ನಮ್ಮಲ್ಲಿ ಹೆಚ್ಚಿನವರು ಶ್ರಮಸಂಸ್ಕೃತಿಯನ್ನೇ ನೆಚ್ಚಿ ಬದುಕಿದವರು. ಈಗ ಕೃಷಿ ಉದ್ಯೋಗವನ್ನು ಮಾಡಲು ಹೆಚ್ಚಿನವರು ಇಷ್ಟಪಡುವುದಿಲ್ಲ. ಎಲ್ಲರಿಗೂ ವೈಟ್ ಕಾಲರ್ ಉದ್ಯೋಗಗಳೇ ಬೇಕು. ಹಾಗಾಗಿ ಯುವಜನತೆ ಹಳ್ಳಿಗಳನ್ನು ಬಿಟ್ಟು ಪಟ್ಟಣ ಸೇರಿರುವುದರಿಂದ ನಮ್ಮಲ್ಲಿ ಬೇಸಾಯ ಮೊದಲಿನಂತಿಲ್ಲ. ಕೃಷಿಯೋಗ್ಯ ಭೂಮಿಯನ್ನು ವಾಣಿಜ್ಯೀಕರಣಕ್ಕೆ ಉಪಯೋಗಿಸಲಾಗುತ್ತಿದೆ. ಇಂದು ಆಳುಗಳು ಮಾಡಬೇಕಾದ ಕೆಲಸವನ್ನು ಯಂತ್ರಗಳು ಮಾಡುತ್ತಿವೆ. ಹಿಂದೆ ನಮ್ಮ ಹಿರಿಯರು 'ಕೈ ಕೆಸರಾದರೆ ಬಾಯಿ ಮೊಸರು' ಎನ್ನುತ್ತಿದ್ದರು. ಈಗ ಯಾರಿಗೂ ತಮ್ಮ ಕೈ ಕೆಸರು ಮಾಡಿಕೊಳ್ಳಲು ಇಷ್ಟವೇ ಇಲ್ಲ. ಹಿಂದೆ ಬೆಳೆಯ ಕಟಾವಿನ ಪ್ರಕ್ರಿಯೆ ಯಾವ ರೀತಿಯಲ್ಲಿ ಆಗುತ್ತಿತ್ತು. ಅದನ್ನು ದಾಸ್ತಾನು ಮಾಡಲಿಕ್ಕೆ ಬತ್ತದ 'ತಿರಿ' ಯಾವ ರೀತಿಯಲ್ಲಿ ಕಟ್ಟುತ್ತಿದ್ದರು. ಯಾವುದೇ ರಾಸಾಯನಿಕ ವಸ್ತುಗಳನ್ನು ವಿನಿಯೋಗಿಸದೆ, ಬೆಳೆದ ಬೆಳೆಯನ್ನು ಹೇಗೆ ದಾಸ್ತಾನು ಮಾಡಿ, ಕಾಪಾಡಿಕೊಳ್ಳ ಬೇಕೆಂಬುದನ್ನು ಹಿಂದಿನವರು ಅರಿತಿದ್ದರು. ಅದೂ ಒಂದು ರೀತಿಯ ಕಲೆ. ಇಂದು ಕೃಷಿಯ ಪಾರಂಪರಿಕ ಜ್ಞಾನ ಎಲ್ಲೋ ಮರೆಯಾಗುತ್ತಿದೆ. ಇಂದು ನಮ್ಮ ಮಕ್ಕಳಿಗೆ ಇದರ ಬಗ್ಗೆ ಎಳ್ಳಷ್ಟೂ ಅರಿವೇ ಇಲ್ಲ.

ಬದುಕಿನ ಸುಖಕರವಾದ ವೃತ್ತದಲ್ಲಿ ಸಮೃದ್ಧಿಯಿಂದ ಜೀವಿಸುತ್ತಿರುವಾಗ ಅಲ್ಲಿ ಪ್ರಗತಿಗೆ ಅವಕಾಶವಿರುವುದಿಲ್ಲ. ಕೇವಲ ಸುಖದಿಂದ ನಮ್ಮದೇ ವ್ಯೂಹದಲ್ಲಿ ನಾವುಳಿದುಕೊಂಡು ನೆಮ್ಮದಿಯಾಗಿದ್ದರೆ ಅದು ಕೇವಲ ಬೆಳವಣಿಗೆಯಾಗಬಹುದೇ ಹೊರತು ಪ್ರಗತಿಯಾಗಲು ಸಾಧ್ಯವೇ ಇಲ್ಲ. ಅದಕ್ಕೆ ನಮ್ಮ ಹಿರಿಯರು ಹೇಳುತ್ತಾರೆ ನೋಡಿ. "ಕುಳಿತು ಉಂಡರೆ ಕುಡಿಕೆ ಹೊನ್ನು ಸಾಲದು" ಎಂಬಂತೆ, ಕುಳಿತು ಉಂಡರೆ ಜೀವನ ರುಚಿಸದು. ಅದು ಕೇವಲ ತಿಂದುಂಡು ಬದುಕಿದ ಒಂದು ಜೀವ ಎಂಬ ಯಂತ್ರವಾಗಿರುತ್ತದೆ. ಈ ಕಾಯವೆಂಬ ಯಂತ್ರಕ್ಕೆ ಕಾಯಕವೆಂಬ ಚಲನಶೀಲತೆ ಬೇಕು. ಹಸಿವಿನಿಂದ ಕಂಗೆಟ್ಟಾಗ ಯಾರೋ ಒಬ್ಬರು ಊಟ ಮಾಡುವುದನ್ನು ನೋಡಿದಾಗ ನಮ್ಮ ಹಸಿವು ಹಿಂಗಲಾರದು. ಹಾಗೆಯೇ ಯಾರೋ ಒಬ್ಬರು ಯಾವುದೋ ಒಂದು ಒಳ್ಳೆಯ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದನ್ನು ನೋಡಿದಾಗ ಅವರು ಮಾಡಿದ ಆ ಕಾರ್ಯದ ಸಂತೃಪ್ತಿ ನಮ್ಮದಾಗಲು ಅಸಾಧ್ಯ. ನಮ್ಮಲ್ಲಿ ಹೆಚ್ಚಿನವರು ನಾವು ಕಷ್ಟಪಟ್ಟಿದ್ದು ಸಾಕು. ಇನ್ನು ನಮ್ಮ ಮಕ್ಕಳು ಕಷ್ಟಪಡುವುದು ಬೇಡ ಅಂತ ಮಕ್ಕಳನ್ನು ಬಹಳ ಮುದ್ದಾಗಿ, ಯಾವ ಕಷ್ಟವೂ ಅವರಿಗೆ ಸೋಂಕದಂತೆ ಬಹಳ ಜತನವಾಗಿ ಬೆಳೆಸುತ್ತಾರೆ. ಅವರು ಹಾಗೆ ಮಾಡುವುದರಲ್ಲಿ ತಪ್ಪಿಲ್ಲ. ಆದರೆ ಕಷ್ಟವನ್ನೇ ನೋಡದೆ ಬೆಳೆದ ಮಕ್ಕಳ ಪರಿಸ್ಥಿತಿ ಮುಂದಿನ ಅವರ ಭವಿಷ್ಯದಲ್ಲಿ ಏನಾಗಬಹುದು. ಚಿಕ್ಕ ಚಿಕ್ಕ ಸಮಸ್ಯೆಗಳಿಗೆ ಹತಾಶರಾಗಬೇಕೆ. ಅಥವಾ ಅದನ್ನು ಎದೆತಟ್ಟಿ ಎದುರಿಸುತ್ತೇನೆಂಬ ಆತ್ಮವಿಶ್ವಾಸವನ್ನು ಬೆಳೆಸಬೇಕಾದುದು ಹೆತ್ತವರ ಕರ್ತವ್ಯ ವಲ್ಲವೇ? ನೀವು ಪಟ್ಟ ಪ್ರತಿ ಕಷ್ಟದಲ್ಲೂ ನಿಮ್ಮ ಮಕ್ಕಳನ್ನು ಭಾಗಿಗಳಾಗಿಸಿ, ನಿಮ್ಮನ್ನು ಬೆಳೆಸಲು ನಾವೆಷ್ಟು ಕಷ್ಟಪಟ್ಟಿದ್ದೇವೆಂಬ ಅರಿವು ಅವರಿಗೆ ಮಾಡಿಕೊಡಿ. ಆಗ ನಿಮ್ಮ ಮಕ್ಕಳಿಗೆ ತನ್ನ ಹೆತ್ತವರ ಬಗ್ಗೆ ಕಾಳಜಿ ಇರುತ್ತದೆ. ಅವರ ಪಟ್ಟ ಕಷ್ಟಕ್ಕೆ ಸಾರ್ಥಕತೆಯನ್ನು ತಂದುಕೊಡಬೇಕೆಂಬ ಹುಮ್ಮಸ್ಸು ಬೆಳೆಯುತ್ತದೆ. ಜೀವನದ ಕೊನೆ ತನಕ ನಾವು ನಿಮ್ಮನ್ನು ಚೆನ್ನಾಗಿ ನೋಡಿಕೊಳ್ಳುತ್ತೇವೆಂಬ ಭರವಸೆಯನ್ನು ನೀವು ಅವರಲ್ಲಿ ಕಾಣಬಹುದು. 'ಮಕ್ಕಳಿಗಾಗಿ ಆಸ್ತಿಯನ್ನು ಮಾಡಿಬೇಡಿ, ಮಕ್ಕಳನ್ನೇ ಆಸ್ತಿಯನ್ನಾಗಿ ಮಾಡಿ'. ಅಂತ ಯಾರೋ ಒಬ್ಬರು ಹಿರಿಯರು ಹೇಳಿದ್ದಾರೆ. ಅಂತಹ ಒಂದು ಸಂಸ್ಕಾರವನ್ನು ಅವರಿಗೆ ನಾವು ಕೊಡಬೇಕು. ಇದು ಅಕ್ಷರಃ ಸತ್ಯ.

# ನನ್ನ ಹಾಗೂ ರೇಡಿಯೋ ನಡುವಿನ ಅವಿನಾಭಾವ ಸಂಬಂಧ

✍ ವನಜಾರಾಜನ್

ಇದನ್ನು ನಾನು ಎಂದೂ ಮರೆತಿಲ್ಲ ನನ್ನ ಜೀವಮಾನ ಪರ್ಯಂತ, ಮರೆಯಲು ಸಾಧ್ಯವೇ ಇಲ್ಲ. ಅಡಿಗೆ ಸ್ಪರ್ಧೆಯಲ್ಲಿ ಭಾಗವಹಿಸಿ ಬಹುಮಾನಗಳು ಕೈ ಸೇರಿದಾಗ ಆಕಾಶವಾಣಿ ಮಹಿಳಾ ವಿಭಾಗದವರು ಸಂದರ್ಶನ ಮಾಡಿ ಹೋದರು. ಅವಕಾಶಗಳ ಹೆಬ್ಬಾಗಿಲನ್ನು ತೆರೆದು, ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಹೊಸ ಹೊಸ ವಿಷಯಗಳನ್ನು ಕಲಿತು, ಬೆಂಗಳೂರು ಆಕಾಶವಾಣಿಯು ನಡೆಸಿದ ಪರೀಕ್ಷೆಗಳಲ್ಲಿ ಬರೆದು ಗೆದ್ದು ಬರಲು ಅವಕಾಶಗಳನ್ನು ಸಾಲು ಸಾಲಾಗಿ




ಕಲ್ಪಿಸಿಕೊಟ್ಟರು. ಮುಂಬಯಿಗೆ ಬರುವ ಮೊದಲು 15 ವರುಷಗಳ ಕಾಲ ರೇಡಿಯೋವಿನೊಡನೆ ನನ್ನ ಕಲಿಕೆ ಮುಂದುವರೆಯಿತು ಎಂಬ ನನ್ನ ಅನುಭವಗಳನ್ನು ತಮ್ಮೊಡನೆ ಹಂಚಿಕೊಂಡು ಹರ್ಷಿಸಬೇಕೆಂಬ ಹಂಬಲವಾಯಿತು (ಇದ್ದಕ್ಕಿದ್ದಂತೆ) ಕಾರಣ ನವೆಂಬರ್ 2ನೆಯ ತಾರೀಖು ರೆಡಿಯೋಡೆ ನೆನಪಾಯಿತು.

"AIR" ಆಲ್ ಇಂಡಿಯಾ ರೇಡಿಯೋ ಬೆಂಗಳೂರು ನವೆಂಬರ್ 2ನೆಯ ದಿನದಂದು 1955ನೆಯ ಇಸವಿ, ಅಸ್ತಿತ್ವಕ್ಕೆ ಬಂದಿತು. ಹೊಸ ಹೊಸ ಪ್ರಯೋಗಗಳ ಕುಶಲ ತಂತ್ರಗಳಿಂದಾಗಿ, Broadcasting Laboratory ಭಾರತ ಎಂಬ ಹೆಸರನ್ನು ಪಡೆಯಿತು. 'ಟಸ್ಕರ್ ಟೌನ್' ನ ಕಬ್ಬನ್ ರೋಡ್ ನಲ್ಲಿದ್ದ A.I.R ಬೆಂಗಳೂರು 1981 ರಲ್ಲಿ ರಾಜಭವನ್ ರಸ್ತೆಯಲ್ಲಿರುವ ಈಗಿನ ಸ್ಥಳಕ್ಕೆ ಬದಲಾವಣೆಯಾಯಿತು. ಹಲವಾರು ನಿಯಮಗಳನ್ನು ಅಂತರ್ಗತ ಮಾಡಿಕೊಂಡು, ದೊಡ್ಡ ಹೆಜ್ಜೆಯನ್ನಿರಿಸಲು ತೊಡಗಿತು. (ಪೆದ್ದಪೆಟ್ಟಿಗೆ) The Idiot box ನ ಮುಂದೆ ರೇಡಿಯೋ ಕೇಳುವವರು ಇದ್ದಾರೆಯೇ? ಎಂಬ ಸಂದೇಹ ಆರಂಭದಲ್ಲಿ ಕಾಡಿದ್ದು ನಿಜ. ಆದರೆ ಹಾಗಾಗಲಿಲ್ಲ. ಇಂದು ಈಗಲೂ ಪುನರ್ ಸೃಷ್ಟಿಯಾದ ಎಫ್. ಎಮ್ (F.M.) ಸರ್ವವ್ಯಾಪಿಯಾಗಿದೆ. 1970 ರಲ್ಲಿ ವಿವಿಧಭಾರತಿ ಯಲ್ಲಿ ಕನ್ನಡ, ಹಿಂದಿ(ಅಮೀನ್ ಸಯಾನಿಯವರ ಧ್ವನಿ ಮರೆಯುವುದೆಂತು?) ಸಿನಿಮಾ ಹಾಡುಗಳನ್ನು ಕೇಳದವರು ಯಾರು? ಅಮೃತವರ್ಷಿಣಿ ಶಾಸ್ತ್ರೀಯ ಮೊಟ್ಟ ಮೊದಲನೆಯ (classical) ಸಂಗೀತವನ್ನು ಪ್ರಸಾರ ಮಾಡಲು ಪ್ರಾರಂಭಿಸಿತು ಜೊತೆಗೆ ಜಾಹೀರಾತುಗಳು ಆಕಾಶವಾಣಿ ಬೆಂಗಳೂರು ಕೇಂದ್ರ 'ವನಿತಾವಿಹಾರ್' ವಿಭಾಗವು ಹೊಸ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತು. ವನಿತೆಯರಿಗೆ ಉಪಯುಕ್ತವಾದ ವಿಷಯಗಳನ್ನು ಆಯ್ಕೆ ಮಾಡಿಕೊಂಡು ಸಂಬಂಧಪಟ್ಟ ತಜ್ಞರು, ಪ್ರವೀಣರು ರೇಡಿಯೋದಲ್ಲಿ ಪಾಠ ಹೇಳಿಕೊಡುವಂತೆ ಏರ್ಪಾಡು ಮಾಡಿದರು. ಪಾಠಗಳನ್ನು, ಆಸಕ್ತಿ ಇರುವವರು ಮನೆಯಲ್ಲೇ ಕುಳಿತು ಕೇಳಿಸಿಕೊಂಡು ಬೆಂಗಳೂರಿನ ಒಂದು ಕೇಂದ್ರದಲ್ಲಿ ರಾಜ್ಯಮಟ್ಟದಲ್ಲಿ ಪರೀಕ್ಷೆ ನಡೆಸುತ್ತಿದ್ದರು.ಅವುಗಳಲ್ಲಿ ಹೆಚ್ಚು ಅಂಕಗಳನ್ನು ಪಡೆದವರಿಗೆ ಸಮಾರಂಭದಲ್ಲಿ ಪಾರಿತೋಷಕವನ್ನು ನೀಡಿ ಗೌರವಿಸುತ್ತಿದ್ದರು. ಆ ರೀತಿ ಎಷ್ಟೋ ವಿಷಯಗಳನ್ನು ತಿಳಿದುಕೊಳ್ಳಲು ನನಗೆ ಸಹಾಯವಾಯಿತು. ಉದಾ: ಆಹಾರ ವಿಜ್ಞಾನ, ಗ್ರಾಹಕ ಶಿಕ್ಷಣ, ರಕ್ಷಿತ ಚಿಕಿತ್ಸೆ (ಮಕ್ಕಳಿಗೆ) ಬಹಳ ಮುಖ್ಯವಾಗಿ ಪರಿಸರ ಪಾಠಶಾಲೆ. (ಬಹುಮಾನಗಳು ಲೆಕ್ಕವಿಲ್ಲದಷ್ಟು)

ಇಂದಿಗೂ ನಾನು ಬೆಳಿಗ್ಗೆ 5 ಗಂಟೆಗೆ ಎದ್ದ ಕೂಡಲೇ ರೇಡಿಯೋ ಸ್ವಿಚ್ ಒತ್ತಿ ಸಂಗೀತ, ಸಾಹಿತ್ಯ, ಕಥೆಗಳು, ವೇದಾಂತ, ಅಗಣಿತ ವಿಷಯಗಳನ್ನು ಆರ್.ಜೆ ಮೂಲಕ ಕೇಳುತ್ತಾ ಕೆಲಸ (ಅಡಿಗೆ ಮನೆ) ಮಾಡುವುದು ನನ್ನ ಅಭ್ಯಾಸ, ಹವ್ಯಾಸವೂ ಕೂಡ. ನನ್ನ ರೇಡಿಯೋಗೆ (ಅದರಲ್ಲಿಯೇ ನಾನು ಆರಿಸಿ ಜೋಡಿಸಿಟ್ಟುಕೊಂಡಿರುವ ಕ್ಯಾಸೆಟ್ ಗಳು) 35 ವರ್ಷಗಳಾಗಿದೆ. ನಿಮ್ಮ ಬಳಿ ಇದೆಯೇ ರೇಡಿಯೋ?

ಕಳೆದ ಸಂಚಿಕೆಯಿಂದ

# ಕಡಲ ಹಾದಿ

(ಉಮಾ ರಾವ್ ಕಥೆಗಳು)

✍ **ಉಮಾ ರಾವ್**



ಗಡ್ಡ ಮೀಸೆ ಉದ್ದ ಜಟೆ ಲಂಗೋಟಿಯ ಮನುಷ್ಯ ಪದ್ಮಾಸನ ಹಾಕಿ ಕಣ್ಮುಚ್ಚಿ ಕುಳಿತಿದ್ದ. ಅವಳ ಎದೆ ಡವಗುಟ್ಟುತ್ತಿತ್ತು. ಮೆಲ್ಲನೆ ಅವನ ಹತ್ತಿರ ಬಂದಳು. ಮಬ್ಬು ಕತ್ತಲಿನಲ್ಲಿ ಅವನ ಮುಖ ದಿಟ್ಟಿಸಿದಳು. ಮುಖ ಮುಚ್ಚಿದ್ದ ಕೂದಲಿ ನಮ್ಮತ್ತೆ ಕಣ್ಣು ಮಗುಗಳನ್ನು ದೃಷ್ಟಿಯಿಂದಲೇ ಬೇರ್ಪಡಿಸುತ್ತಾ. ಪಕ್ಕದಲ್ಲಿ ಯಾರೋ ಬಂದ ನಿಂತಿದ್ದರೆ ಅರಿವಾಗಿ ಅವನು ನಿಧಾನವಾಗಿ ಕಣ್ಣು ತೆರೆದ. ಇದ್ದ ಬದ್ದ ಬೆಳಕಿಗೆ ದೃಷ್ಟಿ ಸರಿ ಹೊಂದಿಸಿ ಕೊಂಡು ಅವಳತ್ತ ನೋಡಿದ. ಒಂದು ಕ್ಷಣದಲ್ಲಿ ಅವನ ಕಣ್ಣುಗಳು ವಿಚಿತ್ರ ಹೊಳಪೇರಿದವು. ತುಟಿ ವಿಕೃತ ನಗುವಿನಲ್ಲಿ ಸೊಟ್ಟ ಗಾಯಿತು. ಮುಪ್ಪಿನ ಎಲೆಗಳು ಮುಖದಲ್ಲಿ ಆಳವಾದಂತೆ ಹೆಚ್ಚಿನ ಹಲ್ಲು ಬಿದ್ದು ಹೋಗಿದ್ದ ನಗೆ ಭಯ ತರಿಸುತ್ತಿತ್ತು. ಅವಳನ್ನು ಮುಟ್ಟುವಂತೆ ಕೈಚಾಚಿದ. ಸೋನಿಗೆ ನಡುಕ ಹುಟ್ಟಿತು. ಒಂದೇ ಏಟಿಗೆ ಹಿಂದಿರುಗಿ ಒಡತೊಡಗಿದಳು. ಮೇಲುಸಿರು ಬಂದರೂ ನಿಲ್ಲದೆ ಆಗ ಎಷ್ಟು ದೂರ ಬಂದಿದ್ದೆ ಎಂಬುದರ ಅರಿವಾಯಿತು. ಪಾರ್ಕ್ ತಲುಪಿದಾಗ ಹೆಚ್ಚು ಜನವಿಲ್ಲದೆ ಖಾಲಿ ಖಾಲಿಯಾಗಿತ್ತು. ಪೂರ್ತಿ ಕತ್ತಲಾಗಿತ್ತು. ಸಮುದ್ರವು ಕತ್ತಲಲ್ಲಿ ಲೀನವಾಗಿತ್ತು. ರೂಮಿಗೆ ಬಂದು ದೀಪ ಹಾಕಿ, ಮಲಗಿದಾಗ ಚಳಿ ಎನಿಸಿತು. ರಘು ಹೊದ್ದು ಗಟ್ಟಿಯಾಗಿ ಕಣ್ಣು ಮುಚ್ಚಿ ಮಲಗಿದಳು. ಊಟವನ್ನು ಮಾಡದೆ ರಾತ್ರಿ ಎಲ್ಲ ಮೆಟ್ಟಿ ಬೀಳುತ್ತಲೇ ಇದ್ದಳು. ಅಘಾತ ಕಡಲಿನ ನಡುವೆ ಕಪ್ಪುಬಂಡೆಗಳು, ಅವನ ವಿಕೃತ ನಗು, ಜಟೆ ಕೂದಲು,ಸಮುದ್ರದ ಮೊರೆತ, ಸಾವಿತ್ರಮ್ಮನ ಬಳೆಗಳ ಶಬ್ದ.

ಬೆಳಗಾಗಿದ್ದು ತಯಾರಾಗಿ ರಿಕ್ಷ ಹತ್ತಿದಳು ಸೋನಿ.

"ಎಲ್ಲಿಗೆ" ಎಂದ ರಿಕ್ಷಾದವನು.

"ಜಾಂಪೋರ್ ಬೀಚ್"

"ಹಾಗಾದರೆ ಮೋಟಿ ದಮನ್ ಗೆ ಹೋಗಬೇಕು"

"ಅದೆಲ್ಲಿದೆ?"

"ಬ್ರಿಜ್ಜಿನ ಅತ್ತ..."

ಅಗಲವಾದ ರಸ್ತೆಗಳು. ಶಿಸ್ತಿನ ಜನ. ಗಲಾಟೆ ಮಾಡುತ್ತಿದ್ದವರು ಪ್ರವಾಸಿಗಳೇ. ಎಲ್ಲೆಲ್ಲೂ ತೆಂಗಿನ ಮರಗಳು. ಇಬ್ಭಾಗವಾಗಿದ್ದ ಊರು. ಇತ್ತ ನಾನಿ ದಮನ್. ಅತ್ತ ಮೋಟಿ ದಮನ್. ಮಧ್ಯ ಸಮುದ್ರ. ಮೇಲೆ ಸೇತುವೆ. ಅದರ ಮೇಲೆ ಓಡುತ್ತಿದ್ದ ರಿಕ್ಷ. ಊರನ್ನು ಸುತ್ತುವರಿದಿದ್ದ ದಪ್ಪ ಕಲ್ಲಿನ ಕೋಟೆ ಗೋಡೆ. ಇದ್ದಕ್ಕಿದ್ದಂತೆ ಮಧ್ಯೆ ತಲೆ ಎತ್ತಿ ಬೆಚ್ಚಿ ಬೀಳಿಸುತ್ತಿದ್ದ ಚರ್ಚಿನ ಗೋಪುರಗಳು.

ಪೋರ್ಟ್ ಗಾರ್ಡನ್ನಿನಿಂದ ಸಮುದ್ರದೊಳಗಿಳಿದಿದ್ದ ಕಲ್ಲಿನ ಮೆಟ್ಟಿಲುಗಳು. ಅವುಗಳುದ್ದಕ್ಕೂ ಮೈಚಾಚಿದ್ದ ಮೀನಿನ ಬಲೆಗಳು. ಕಾವಲುಗಾರನ ಹಾದಿ ನೋಡುತ್ತಾನಿಂತಿದ್ದ ಲೈಟ್ ಹೌಸ್ ಗಳು. ಅತ್ತಲೋ ಇತ್ತಲು ತಿಳಿಯದೆ ಸಮುದ್ರದ ಮಧ್ಯೆ ಅನುಮಾನಿಸುತ್ತಿದ್ದ ಬಣ್ಣ ಗೆಟ್ಟ ದೋಣಿಗಳು. ಬೆಂಕಿ ಕೊಡುವ ಕೈಗಾಗಿ ಕಾಯುತ್ತಾ ಮರಳಲ್ಲಿ ಹುದುಗಿ ಕೂತ ಕೋವಿಗಗಳು. ತನ್ನ ಅಸ್ತಿತ್ವವನ್ನು ಮತ್ತೆ ಮತ್ತೆ ಅರಿವು ಮಾಡಿಸುತ್ತಲೇ ಇರುವ ಸಮುದ್ರ.

ಎಲ್ಲೆಲ್ಲೂ ಏನೋ ಸ್ತಬ್ಧತೆ. ಬದುಕಿಗಿಂತ ಸಾವನ್ನೇ ಹೆಚ್ಚು ಕಂಡ ಊರಿದು ಎಂದಂತೆ.... ಈ ಊರಿಗೇಕೆ ಬೇಕಿತ್ತು ಮಾಧವ? ಯಾರು ಹೇಳಿದ್ದರು "ಗೋವಾದಂತೆ ಇದೆ ಧಮನ್. ಆದರೆ ಸ್ವಲ್ಪ ಚಿಕ್ಕದಷ್ಟೇ ಎಂದು. ಗೋವಾದ ಹನಿಮೂನ್, ಎಲ್ಲೆಲ್ಲೂ ನೀಲಿ ಸಮುದ್ರ. ಬೆಳ್ಳಿ ಉಸುಕು. ತೂಗು ವ ತೆಂಗುಗುಗಳು. ಖುಷಿಯ ಹಸಿರಿನ ಲೇಪ. ಬಣ್ಣ ಬಣ್ಣದ ಫ್ರಾಕಿನ ಹೆಂಗಸರು. ಗಿಟಾರಿನ ಯುವಕರು. "ಲವ್ ಗ್ರೋವ್" ನ ಬೆಚ್ಚಗಿನ ಕೋಣೆ. ದಿನಾ ರಾತ್ರಿ ಮಾಧವನ ಮಾದಕ ದನಿ "ಇವತ್ತೇಷ್ಟು ಸಲ...?

ಜಾಂಪೋರ್ ಬೀಚ್ ದೇವ್ಕಾ ಬೀಚಿಗೆ ವಿರುದ್ಧ. ದಟ್ಟ ಮರಗಳ ಸಾಲು ಸಾಲು. ನಂತರ ವಿಶಾಲವಾದ ಮರಳ ಹಾಸು. ಅದಾದ ಮೇಲೆ ಅಘಾತವಾದ ಶಾಂತ ಸಮುದ್ರ ಮೆಲುಗಾಳಿ. ಅಲ್ಲೊಬ್ಬರು ಇನ್ನೊಬ್ಬರು ಓಡಾಡುವವರು. ಬಣ್ಣ ಬಣ್ಣದ ದಪ್ಪ ಚಂಡಾಡುವ ಮಕ್ಕಳು. ನೀಲಿ ಆಕಾಶದಲ್ಲಿ ವಿಹರಿಸುವ ಹಕ್ಕಿಗಳು. ಇಲ್ಲಿ ಕಡಲಿಗೆ ಯಾವ ಉದ್ವೇಗವಿಲ್ಲ ಅವಸರವಿಲ್ಲ. ದಿನವೆಲ್ಲ ಕೂತು ಎಲ್ಲಾ ಮರೆತು ಬಿಡಬಹುದಾದಂತ ಜಾಗ.

ಮಾದೇವ ಸಿಗಬಹುದೇ ಇಲ್ಲ? ಎಷ್ಟು ದಿನ ಹೀಗೆ ಅಲೆಯುವುದು? ತಾನು ಅಲೆಯುತ್ತಿರುವುದು ಮಾದವನ ಜಾಡಿ ನಲ್ಲಿ ಅಥವಾ ಬರಿಯ ನಿಶ್ಚಿತತೆಯ ಜಾಡಿನಲ್ಲಿ? ಏನು ತಿಳಿಯದೆ ರಿಂದ ಮಾಧವ ಎಲ್ಲೋ ಇದ್ದಾನೆ ಎಂಬ ಸಾಧ್ಯತೆ ಹುಟ್ಟಿಸುವ ತುಮುಲಗಳಿಗಿಂತ ತಿಳಿದು ಅವನಿಲ್ಲವೆಂದಾಗಿ ಬಿಟ್ಟರೆ..... ಇದರಿಂದೊದಗುವ ನಿರಂಬಳತೆ ವಾಸಿ ಎಂದೇ?

ದೂರದಲ್ಲಿ ನಿಂತಿರುವ ಬೇಲ್ ಪುರಿವಾಲ. ಮೀನಿನ ಜಾಲದ ಗಂಟು ಬಿಡಿಸುತ್ತಿರುವ ಲುಂಗಿಯವ ಈಜುತ್ತಿರುವ ಯಾತ್ರೆ ಯಾರಾಗಿರಬಹುದು ಮಾಧವ? ಹಾಗಿದ್ದರೆ ತನ್ನ ಹತ್ತಿರ ಬರದೆ ಹೇಗಿದ್ದಾನು? ಒಂದು ಸಾವಿತ್ರಮ್ಮ ಎಂದಿನಂತೆ ಬೆಳಗಾಗಗೆದ್ದು ಬಂದು ಮನೆಗೆ ರಂಗೋಲಿ ಹಾಕುತ್ತಿದ್ದರು. ನಾಲ್ಕು ಐದು ಜನ ಏದುತ್ತಾ ಓಡಿ ಬಂದರು. ಒಬ್ಬ ವ್ಯಕ್ತಿ ಊರ ಚಯ ಹನುಮಂತನ ಗುಡಿಯ ಪ್ರಾಂಗಣದಲ್ಲಿ ಹಿಂದಿನ ರಾತ್ರಿಯಿಂದ ಮಲಗಿದ್ದನ್ನು ಅವರು ಕಂಡಿದ್ದರು. ಥೇಟ್ ಸಾವಿತ್ರಮ್ಮನ ಗಂಡನ ಹಾಗೆ ಇದ್ದಾನಂತೆ. ಅವನೇ ಎಂದು ಊರಿನ ಹಿರಿಯರಾದ ಆತನ ಮನೆಯವರನ್ನೆಲ್ಲಾ ಚೆನ್ನಾಗಿ ಅರಿತ ಗುಂಡಪ್ಪನವರ ಹೇಳಿದರಂತೆ. ಎಷ್ಟು ಹೇಳಿದರು ಊರೊಳಗೆ ಬರಲು ತಯಾರಿಲ್ಲವಂತೆ. "ಸಾವಿತ್ರಮ್ಮ, ನೀವು ಬಂದು ಅವರನ್ನು ಒಪ್ಪಿಸಿ ಮನೆಗೆ ಕರೆದುಕೊಂಡು ಬರವಿರಂತೆ. ಬನ್ನಿ" ಎಂದು ಕಳವಳ ಪಟ್ಟರು. ಸಾವಿತ್ರಮ್ಮ ಒಂದು ಕ್ಷಣ ಮಾತಾಡದೆ ನಿಂತರು ಏನೋ ಯೋಚಿಸುತ್ತಾ ತಲೆ ತಗ್ಗಿಸಿದರು. "ಮನಸ್ಸಿಲ್ಲದವರಿಗೆ ಒಪ್ಪಿಸಿ ಕರೆದುಕೊಂಡು ಬಂದಾದರೂ ಏನು ಪ್ರಯೋಜನ...ಹಾಗೆ ಬೇಕಿದ್ದರೆ ಅವರೇ ಬರುತ್ತಿದ್ದರು" ಅಷ್ಟೇ ಹೇಳಿ ರಂಗೋಲಿ ಪೂರ್ತಿ ಮಾಡಲು ಹೊರಟಿದ್ದರು ಸಾವಿತ್ರಮ್ಮ.

ಮರಳು ಗುಪ್ಪೆಯಲ್ಲಿ ಗುಂಡಿ ತೋಡಿ ನೀರು ಬರುತ್ತದೆ ಕೆಕೆ ಹಾಕುತ್ತಾ ಚಪ್ಪಾಳೆ ತಟ್ಟುತ್ತಿದ್ದ ಮಕ್ಕಳು. ಗಾಳಿಪಟ ಬೇಕೆಂದು ಅಮ್ಮನನ್ನು ಬಿಡಿಸುತ್ತಿರುವ ಮಕ್ಕಳು. ಜಾಯಿಂಟ್ ವೀಲ್ ನಲ್ಲಿ ಕಿಲಕಿಲ ನಗುವ ಮಕ್ಕಳು. ಐಸ್ ಕ್ರೀಮ್ ಚಪ್ಪಲಿಸುವ ಮಕ್ಕಳು. ಅಪ್ಪನ ಭುಜದ ಮೇಲೆ ದಣಿದು ನಿದ್ದೆ ಹೋದ ಮಕ್ಕಳು. ಪ್ರೀತಿಗೆ ಹೇಗೆ ಹೇಳುವುದು? ಎಂದು ಹೇಳುವುದು? ಎಂದು ಹೇಳುವುದು? ಏನೆಂದು? ಸ್ಕೂಲ್ ನಲ್ಲಿ ಗುಸು ಗುಸು ಮಾಡುವ ಹುಡುಗಿಯರ ಅಯ್ಯೋ ಪಾಪ ಎನ್ನುವ ರೋಸಿ ಟೀಚರ್ ನಂತವರಿಂದ ಅವಳಿಗೆ ತಿಳಿದು ಬೀಸುವ ಮೊದಲು....

ಜಾಂಪೋರ್ ಬೀಚನಿಂದ ವಾಪಸ್ ಬಂದು ಮಲಗಿದಾಗ ಒಂದು ರಾತ್ರಿ ಕೊಂಚ ಉದ್ವೇಗ ಕಡಿಮೆಯಾಗಿತ್ತು. ಸೋನಿ ಮತ್ತೆ ದಮನ್ ವಿವರಗಳನ್ನು ಒಳಗೊಂಡ ಪುಸ್ತಕ ತೆಗೆದು ಓದಿದಳು. ಇನ್ನೇನು ಉಳಿದಿದೆ...ಹಾಂ ಮೋಟಿ ದಮನ್, ಪ್ರಖ್ಯಾತ ಚರ್ಚ್, ಲೈಟ್ ಹೌಸ್, ಸಿಮೆಟ್ರಿ, ಜೈಲು ಆ ಭಾಗ. ಚಳಿ ಎನಿಸಿತು. ಬೆಡ್ ಶೀಟ್ ಕತ್ತಿನವರೆಗೂ ಎಳೆದುಕೊಂಡು ಕಣ್ಮುಚ್ಚಿದಾಗ ತಲೆ ತುಂಬಾ ಸಂಜೆ ಕಂಡ ಸಮುದ್ರದ ನೀರವತೆ.

ಎಂಥಾ ಭವ್ಯವಾದ ಚರ್ಚು. ಅದು, ದೇಶ ವಿದೇಶದ ಮೈಮರೆತು ನಿಂತು ನೋಡುತ್ತಿದ್ದರು. ಬೃಹದಾಕಾರದ ಕಿಟಕಿ ಬಾಗಿಲುಗಳು. ಎಲ್ಲೆಲ್ಲೂ ಚಿತ್ತಾರ. ಸ್ಪ್ರಿನ್ಡ್ ಗ್ಲಾಸಿನ ಕಿಟಕಿಗಳು. ಗೋಡೆ ತುಂಬಾ ಯೇಸುಕ್ರಿಸ್ತನ ಬದುಕಿನ ಚಿತ್ರಗಳು. ಹಂತ ಹಂತವಾಗಿ ರೂಪಿಸಿದ್ದು. ಅವನಿಗೆ ಮೈತುಂಬ ಹೊಡೆದ ಮೊಳೆಗಳಿಂದ ಹನಿ ಹನಿಯಾಗಿ ಒಸರುತ್ತಿದ್ದ ನೆತ್ತರು.. ಈಗ ಎಲ್ಲಾ ಶಾಂತಿ ತಂಪು ಮೌನ.

ವಿಚಿತ್ರ ಆ ಜೈಲು ಚರ್ಚಿಗೆ ಅಷ್ಟು ಹತ್ತಿರದಲ್ಲಿತ್ತು. ಬುಧಕಾರದ ಶತಮಾನದ ಹಿಂದಿನ ಕಟ್ಟಡ. ಜೈಲಿನ ಅಧಿಕರಿಗೆ ಅಚ್ಚರಿ,"ಏನು ನೀವು ಜೈಲುಗಳ ಬಗ್ಗೆ ರಿಸರ್ಚ್ ಮಾಡ್ತಿದ್ದೀರಾ?" ಎಂದ. ಸೋನಿ ಅಲ್ಲಿರುವವರ ಹೆಸರಿನ ಪಟ್ಟಿ ನೋಡಬಹುದು ಎಂದು ಕೇಳಿದಾಗ "ಇಲ್ಲ ಕೈದಿಗಳ ಬಗ್ಗೆ" ಎಂದಳು ಸೋನಿ.

ಕಪಾಟಿನೊಳಗಿನಿಂದ ಉದ್ದನೆಯ, ವಿಚಿತ್ರ ಹಳೆಯ ವಾಸನೆಯಿಂದ ಪುಸ್ತಕ ಹೊರತೆಗೆದ. ಅವತ್ತಿನ ಹೆಸರುಗಳಿವೆ ಪಟ್ಟಿಯ ಮೇಲೆ ಕಣ್ಣೋಡಿಸಿದಾಗ ಅವಳ ಕೈ ನಡುಗುತ್ತಿತ್ತು. ಹೆಸರು, ವಿಳಾಸ, ವಯಸ್ಸು, ವಿವರಗಳು, ಕಿಟಕಿ ಬಾಗಿಲು ಭದ್ರವಾಗಿ ಮುಚ್ಚಿಕೊಂಡು ಗಪ್ಪೆಂದು ವರ್ಷಗಳಿಂದ ನಿಂತಿರುವ ಈ ಬೃಹತ್ ಕಟ್ಟಡದ ಒಳಗೆ ಎಷ್ಟೋಂದು ಕುದಿಯುವ ಮನಗಳು, ವಿಚಿತ್ರ ಬೇ, ಎಲ್ಲದರ ಮೇಲೆ ಒಂದೇ ಬಗೆಯ ಗೀರು ಗೀರು ಬಟ್ಟೆಯ ಹೊದಿಕೆ. ಪಟ್ಟಿಯಲ್ಲಿ ಮಾಧವನನ್ನು ಹೋಲುವವರು ಯಾರು ಕಾಣ ಬರಲಿಲ್ಲ. ಸದ್ಯ, ಇಲ್ಲೇಕೆ ಈ ಅರ್ಥವಾಗದ ಭಯ.... ಶವಾಗಾರದಲ್ಲಿ ಇರದ್ದಂತಾದ್ದು.."

"ಎಂತೆಂಥವರಿದ್ದಾರೆ ಗೊತ್ತಾ ಇಲ್ಲಿ, ಒಬ್ಬನಿಗೆ ನಾಳೆ ಬಿಡುಗಡೆಯಾಗಲಿದೆ. ಅವನು ಹೇಳ್ತಾನೆ "ಅವತ್ತು ರಾತ್ರಿ ಅಪ್ಪನ ಕೊಂದದ್ದು ನಾನಲ್ಲ" ಆದರೆ ಅಮ್ಮ ಒಪ್ಪಲ್ಲ. ಈಗ ಬಿಡುಗಡೆಯಾಗಿ ಮನೆಗೆ ಹೋದರು ಕೊಲೆಗಟುಕ ಅಂತಾಳೆ ನನ್ನ ಮನೇಗೆ ಕಳಿಸಬೇಡಿ" ಅಂತ. ಇನ್ನೊಬ್ಬ ತನ್ನ ಮಗು ಹುಟ್ಟಿದ ತಕ್ಷಣ ಕತ್ತುಹಿಸುಕಿದವನು. ಅವನಿಗೆ ಹಿಂದಿನ ರಾತ್ರಿ ಕನಸಾಗಿತ್ತಂತೆ. ಆ ಮಗು ದೊಡ್ಡದಾದ ಮೇಲೆ ತಂದೆ ತಾಯಿನ ಕೊಲ್ಲುತ್ತೆ ಅಂತ. ಅದಕ್ಕೆ ನಾನು ಮಾಡಿದ್ದೆ ಸರಿ ಅಂತಾನೆ. ನೋಡಬೇಕಾ ಒಳಗೆ ಹೋಗಿ ಇಂಟರೆಸ್ಟಿಂಗ್ ಆಗಿರುತ್ತೆ.

ಅವನ ಉತ್ಸಾಹದಿಂದ ಹಿಂಜರಿಯುತ್ತ "ಇಲ್ಲ ಥ್ಯಾಂಕ್ಸ್" ಎಂದವಳೇ ಅಲ್ಲಿಂದ ಹೆಜ್ಜೆ ಹಾಕಿದಳು ಸೋನಿ. ಎಷ್ಟು ವರ್ಷಗಳ ಕೆಳಗೆ ಅದು. ಮಂಜುಳಾ ಮಾತು ಕೇಳಿ ಅಮ್ಮನತ್ತ ಓಡಿದ್ದು." ಅಮ್ಮ ಸಾವಿತ್ರಮ್ಮನ ಗಂಡ ಜೈಲಿನಲ್ಲಿದ್ದಾರಂತೆ. ಸಾವಿತ್ರಮ್ಮನ ಮನೆಗೆ ಕರಿಬೇಡ. ಎಂದು ಗೋಗರೆದಿದ್ದು," ಸುಮ್ಮನಿರು ಯಾರು ಹೇಳಿದರು ಹುಚ್ಚು ಹುಚ್ಚಾಗಿ. ಇಷ್ಟರ ಮೇಲೆ ಇದ್ದರೆ ತಾನೆ ಸಾವಿತ್ರಮ್ಮ ಏನು ಮಾಡಿದರು ಪಾಪ..." ಎಂದು ಅಮ್ಮ ಬೈದಿದ್ದು. ಅಂದಿನಿಂದ ಸಾವಿತ್ರಮ್ಮ ಬೇರೆ ಆದದ್ದು.

ಕಲ್ಲಿನ ಶಾಲೆಯ ಕಟ್ಟಡ. ಅದನ್ನು ಸುತ್ತುವರಿದ ವಿಶಾಲವಾದ ಆಟದ ಮೈದಾನ. ಎಷ್ಟೊಂದು ಹುಡುಗರು. ಫುಟ್ಬಾಲ್ ನ ಹಿಂದೆ ಹುಮ್ಮಸ್ಸಿನಿಂದ ಓಡುವ ಕಾಲುಗಳು. ದಣಿಯದ ಸ್ನಾಯುಗಳು. ಕೆಚ್ಚಿನ ಮುಖಗಳು. ಕೆಂಪು- ಬಿಳಿ- ನೀಲಿ -ಹಳದಿ ಟೀ ಶರ್ಟುಗಳು. ಇದರಲ್ಲೊಂದು ಜೋಡಿ ಕಾಲು ಇವತ್ತು ಮನೆ ಮುಟ್ಟದಿದ್ದಿತೇ? ಸಿಮೆಟ್ರಿಯನ್ನು ಸುತ್ತುವರಿದಿದ್ದ ಗೋಡೆಗೊಂದು ಬಿಳಿಯ ಮರದ ಗೇಟು. ನೂರಾರು ವರ್ಷಗಳಿಂದ ಹಾಗೆ ಇಟ್ಟೇನೋ? ಸೋನಿ ನಿಂತಳು. ಇಲ್ಲಿ ನೋಡುವುದೇನಿದೆ? ಆದರೆ ಬಿಟ್ಟು ನಡೆಯಲು ಆಗದೆ ನಿಧಾನವಾಗಿ ಗೇಟ್ ತೆಗೆದಳು. ವಿಶಾಲವಾದ ಹಸಿರು ಹುಲ್ಲಿನ ಹಾಸು. ಅಲ್ಲಿ ಇಲ್ಲಿ ತಂಪು ಚೆಲುವ ಮರಗಳು. ಕೆಲವು ಮರಗಳಲ್ಲಿ ಹೂಗಳು ಹಕ್ಕಿಗಳು. ಒಂದು ಕಡೆ ಉದ್ದಕ್ಕೂ ಬಿಳಿಯ ಗೋರಿಗಳು. ಅದರ ಮೇಲೆ ಅಷ್ಟು ಚಿತ್ತಾರ. ಅರ್ಧಂಬರ್ಧ ಅಳಿಸಿದ ಹೆಸರು ಇಸವಿ ಏನೇನೋ ವಿವರ, ಶಿಲುಬೆ, ಸುತ್ತಮುತ್ತಲೂ ಕಲರವ ಮುಟ್ಟದಂತ ಅಗಾಧ ಮೌನದ ಹೊದಿಕೆ. ಮಿಲಿಟರಿ ಬೂಟುಗಳ ಸಿಡಿದ ಕೋವಿಗಳ, ಕಡಲ ರೊಚ್ಚಿಗೆ ಸಿಕ್ಕಿ ಮುರಿದ ಹಡಗುಗಳ, ಯಾರಿಗೂ ತಲುಪದ ಆಕ್ರಂದನಗಳ ಎಂತೆಂಥ ನೆನಪುಗಳು ಅಡಗಿತ್ತು ಇಲ್ಲಿ.

ವಿಲಿಯಂ ಕ್ರಿಸ್ಟೋಫರ್, ಡಿ. ಗಾಮಾ... ಅಳಿದುಳಿದ ಹೆಸರುಗಳನ್ನು ಓದುತ್ತಾ ಸೋನಿ ನಿಧಾನವಾಗಿ ನಡೆದಳು ಗೋರಿಗಳಿದ್ದಕ್ಕೂ. ಎಷ್ಟು ದೂರ ಬಂದವರು ಮನೆಗಳಲ್ಲಿ ಬರಿಯ ನೆನಪಾಗಿ ಇಲ್ಲೇ ಉಳಿದವರು. ಕೊನೆಯ ಧಕ್ಕೆ ಬಂದಾಗ ನಿಂತಳು. ಸಿಲ್ವೇಸ್ಟಾರ್ ಡಿ ಕೋಸ್ಟ 27 ವರ್ಷದ ಯುವಕ ಮಾಧವನ ವಯಸ್ಸೆ ಹೇಗಿದ್ದಿರಬಹುದು? ಕತ್ತಿಯ ಅಲೆಗೆ ಸಿಕ್ಕನೆ? ಭಯಂಕರ ಕಾಯಿಲೆಗೆ ಶರಣಾದನೆ? ಅತೀವ ಕಿನ್ನತೆಯಿಂದ ತಾನೇ ಜೀವ ತೆಗೆದುಕೊಂಡನೆ ಏನಾಯಿತು ಅವನಿಗೆ? ಎಷ್ಟು ಕನಸು ಹೊತ್ತು ಬಂದಿದ್ದಿರಬಹುದು. ಮರಳಿ ಹೋಗಲು ಹೇಗೆ ದಿನ ಎನಿಸುತ್ತಿರಬಹುದು.

ಕಾದಿದ್ದಿರಬಹುದಲ್ಲ ಸಾವಿರಾರು ಮೈಲುಗಳಾಚೆ ಸಿಲ್ವೆಸ್ತರ ನ ಹುಡುಗಿ. ಅವಳ ಮುಖ ಕವಿದ ಕಂದು ಕೂದಲ ಹಿಂದೆ ಸರಿಸಿ ಮುತ್ತು ಕೊಟ್ಟು ಹೊರಟು ನಿಂತಾಗ ಎರಡು ತಿಂಗಳ ಎಳೆ ಬಸುರಿ. ಕಾದೆ ಕಾದಿರಬಹುದು. ಒಬ್ಬಳೇ ಬೇನೆ ತಿಂದಾಗ ಮಗ ಮಡಿಲು ತುಂಬಿದಾಗ. ಮೊದಲ ಬಾರಿ ಮರಳು ನಗೆ ನಕ್ಕಾಗ, ಗಲ್ಲದಲ್ಲಿ ಮೂಡಿದ ಗುಳಿ ಥೇಟ್ ಅಪ್ಪನಂತೆ ಎನಿಸಿದಾಗ. ದೂರದಿಗಂತದಲ್ಲಿ ಚಿಕ್ಕೆಯಾಗಿ ಮೂಡುವ ಹಡಗುಗಳ ಮೇಲೆ ಕಣ್ಣು ನೆಟ್ಟುಕೊಂಡು. ಅತ್ತಲಿಂದ ಬಂದವರಿಗೆಲ್ಲ ಸುದ್ದಿಗಾಗಿ ಅಂಗಲಾಚುತ್ತಾ. ನಿದ್ದೆ ಮುಟ್ಟದ

ಕಣ್ಣುಗಳ ಸರತ್ರಿಯವರೆಗೂ ಪುಟಾಣಿ ಕಾಲು ಚೀಲಗಳ ಮೇಲೆ ನೆಟ್ಟು ನಾಯಿಮರಿಗಳ ಕಸೂತಿ ಹಾಕುತ್ತಾ. ಅದರ ಮೇಲೆ ಉರುಳಿದ ಕಂಬನಿ ಅದರ ಬಣ್ಣ ಕೆಲಸದಂತೆ ಮೃದುವಾಗಿ ಒರೆರಸುತ್ತಾ. ಎಷ್ಟು ದಿನ ಎಷ್ಟು ವರ್ಷ.

ಎಷ್ಟು ದಿಗಿಲುಗೊಂಡಿರಬಹುದು ಮಗ ಬೆಳದಂತೆ. ಕಡಲ ಕಂಡು ಮೋಹಗೊಂಡಂತೆ. ಬಂದು ಹೋಗುವ ಹಡಗುಗಳ ನೋಡ ನೋಡುತ್ತಾ ದಿನವವೆಲ್ಲ ಮೈಮರೆತಂತೆ. ಕಾಗದದ ದೋಣಿ ನೀರಿನಲ್ಲಿ ತೇಲಿಬಿಟ್ಟು ಅಲೆ ಅವ್ವನ್ನು ಮರಳಿ ತಂದೆಸೆದಾಗ ಚಪ್ಪಾಳೆ ತಟ್ಟಿ ನಕ್ಕಂತೆ "ನೋಡು ನೀನು ದೊಡ್ಡವನಾದ ಮೇಲೆ ಚಿಕ್ಕಪ್ಪನಂತೆ ಆಗುವೆಯಂತೆ". ಎಷ್ಟು ಚೆನ್ನಾಗಿ ಕುರ್ಚಿ ಮೇಜು ಎಲ್ಲ ಮಾಡ್ತಾರೆ ಚಿಕ್ಕಪ್ಪ. ಎಷ್ಟು ದೊಡ್ಡ ಅಂಗಡಿಗಳು ನೀನು ಅವರ ಹಾಗೆ ಆಗುವೆಯಂತೆ.. ಹೂಂ...?" ಎನ್ನುತ್ತಾ ಅವನನ್ನು ಗಟ್ಟಿಯಾಗಿ ಕಟ್ಟಿಕೊಂಡು ಮನೆ ಅತ್ತ ನಡೆಸಿ ತಂದಂತೆ. ದಪ್ಪಂದು ಪಕ್ಕದ ಮೈದಾನದಿಂದ ಬಂದ ಫುಟ್ಬಾಲ್ ಎದುರಿಗೆ ಬಿದ್ದಾಗ ಸೋನಿ ಬೆಚ್ಚಿದಳು. ಸಣ್ಣ ಉದ್ಗಾರ ತೆಗೆದಳು. ನಿಧಾನವಾಗಿ ಬಗ್ಗಿ ಅದನ್ನೆತ್ತಿ ವಾಪಸ್ ಎಸೆದಳು. ಹಳದಿ ಟಿ-ಶರ್ಟಿನ ಕಪ್ಪು ಹುಡುಗ ಅದನ್ನು ಚಕ್ಕನೆ ಹಿಡಿದು ಓಡಿದಂತೆ. ಆವರಿಸಿಕೊಂಡು ನಿಧಾನವಾಗಿ ಎಲ್ಲಿಂದ ಹೊರಗೆ ನಡೆದಳು.

ಮಾರನೆಯ ದಿನ ಅವಳೆದ್ದಾಗ ಆರು ಘಂಟೆ. ಮ್ಯಾನೇಜರ್ ಹತ್ತಿರ ನಡೆದು ಲೆಕ್ಕ ಕೊಟ್ಟಾಗ "ಇಷ್ಟು ಬೇಗ ದಮನ್ ನೋಡಿ ಆಗಿ ಹೋಯಿತೇ? ಇನ್ನೂ ನಾಲ್ಕು ದಿನ ಇರುವವರು ಇದ್ದೀರಲ್ಲ? ಎನ್ನುತ್ತಲೆ ಅವನು ರಸೀತಿ ಕೊಟ್ಟ. ಬ್ಯಾಗೆತ್ತಿ ರಿಕ್ಷಾದಲ್ಲಿಟ್ಟು ಹೊರಟು ನಿಂತಾಗ ಮನಸ್ಸಿಗೆ ವಿಚಿತ್ರ ಹಗುರ ವರ್ಷಗಳಿಂದ ಮಡುಗಟ್ಟಿದ್ದ ಕಣ್ಣೀರು ಇದ್ದಕ್ಕಿದ್ದಂತೆ ಬಂದ ಬಿಸಿಲಿಗೆ ಆವಿಯಾಗಿ ತೇಲಿ ಹೋದಂತೆ.

ದಾರಿಯಲ್ಲಿ ರಿಕ್ಷಾ ನಿಲ್ಲಿಸಿ ಹಸಿರೆಲೆಗಳ ಮಧ್ಯೆ ನಳನಳಿಸುತ್ತಿದ್ದ ಬಣ್ಣ ಬಣ್ಣದ ಗುಲಾಬಿ ಗೊಂಚಲು ಕೊಂಡಳು ಸೋನಿ. ಚರ್ಚಿನ ಮುಂದೆ ಇಳಿದಳು. ಒಂದು ಕ್ಷಣ ಕಣ್ಮುಚ್ಚಿದಳು. ನಿಧಾನವಾಗಿ ಬಗ್ಗಿ ಮೃದುವಾಗಿ ಹೂ ಗೊಂಚಲು ಅವನ ಮೇಲೆ ಇಟ್ಟಳು. ಎಲೆ ಹೂಗಳ ದಾಖಲಾಟದ ಮರ್ಮರವು ಅವನನ್ನು ಎಚ್ಚರಿಸಬಹುದು ಎಂಬಂತೆ. ಹಾಗೆ ದಿಟ್ಟಿಸಿದಳು. ಮರುಕ್ಷಣವೇ ತಟ್ಟನೆ ತಿರುಗಿದಳು. ಕಣ್ಣಂಚಿನಲ್ಲಿ ಮೂಡಿದ ಹನಿ ಕೆಳಗೆ ತುಳುಕುವ ಮೊದಲೇ ಬೇಗ ಬೇಗನೆ ಕಾಲು ಹಾಕಿದಳು ರಿಕ್ಷಾದತ್ತ, ಹಿಂತಿರುಗಿ ನೋಡದೆ. ಹೊರಡಲು ತಯಾರಾಗಿ ಹಾರ್ಟ್ ನ ಮಾಡುತ್ತಾ ನಿಂತಿದ್ದ ಮುಂಬೈ ಬಸ್ ಹತ್ತುವ ಮೊದಲು ಅವಸರವಾಗಿ ಪ್ರೀತಿಗಾಗಿ ಕ್ಯಾಡ್ಬರಿ ಕೊಂಡಳು.

**ವಿಜಯ ವಿಕ್ರಮ**

ವಾಹ್ ..ವಾಹ್ ..ವಿಕ್ರಮನ ದಿಗ್ವಿಜಯ,
ಅಗ್ನಿ ಪರೀಕ್ಷೆ..ಎದುರಿಸಿ ನಡೆಸಿತು,
ಅಧ್ಭುತ ಯಶಸ್ವಿ ಚಂದ್ರಾಯನ..
ಭಾರತಾಂಬೆಯ ಮುಕುಟದ ಹೆಮ್ಮೆಯ ಹೊನ್ನ ಗರಿಗೆ, ನಮನ,
ವಿಶ್ವ ಗುರು.".ನಮೋ ಭಾರತ.". ಜಗತ್ತಿಗೆ..ಮಹಾಗುರು..ನೀ ..ಸತತ,
ಮೇರಾ ಭಾರತ್ ಮಹಾನ್,
ಏಕ್ ಭಾರತ್ ಶ್ರೇಷ್ಠ ಭಾರತ್,
ಅತ್ಯುತ್ಕೃಷ್ಟ..ಅದಮ್ಯ..ಸಾಧನೆ..
ಹೆಮ್ಮೆಯ ಗರಿಮೆ..ಇಸ್ರೋ ಸಾಧನೆ,
ಅನ್ಯ ದೇಶಗಳಿಗೆಲ್ಲಾ ..ಉತ್ತಮ ಪ್ರೇರಣೆ.

✍ ಸುಮನಾ

# ಯಾರದ್ದಾದರೇನು ? ತಂದೆ..ತಂದೆಯೇ ಅಲ್ಲವೇ??

ಅದು ಕೆನರಾ ಬ್ಯಾಂಕ್ ನ ಕ್ಯಾಶ್ ಕೌಂಟರ್ ರಶ್ ಇತ್ತು. ಅಲ್ಲಿ ಒಬ್ಬರು ಸುಮಾರು 75 ವರ್ಷದ ಅಜ್ಜ ಕೈಯ್ಯಲ್ಲಿ ಚೀಟಿ ಯೊಂದನ್ನು ಹಿಡಿದು ಬಂದಿದ್ದರ. ಕ್ಯಾಶಿಯರ್ ಅವರ ಅಕೌಂಟ್ ಚೆಕ್ ಮಾಡಿದ 660 ರೂ ಮಾತ್ರ ಇತ್ತು. ಕಳೆದ 2 ತಿಂಗಳಿಂದ 15 ಲಕ್ಷದ ಹೋಂ ಲೋನ್ ನ 14,000 ರೂ EMI ಕಟ್ಟಿರಲಿಲ್ಲ ಆ ಮನುಷ್ಯ. ಕ್ಯಾಶಿಯರ್ ಸಿಟ್ಟಲ್ಲಿದ್ದ.. "ಏನಜ್ಜ, 2 ತಿಂಗಳಿಂದ EMI ಕಟ್ಟಿಲ್ಲ ಅಕೌಂಟ್ ಅಲ್ಲಿ ಹಣ ಇಲ್ಲ ಏನಾಗಿದೆ ನಿಮಗೆ?" ಮತ್ತೆ ಕೂಗಿದ.. "ನೋಡಿ ಮಗ ಅಕೌಂಟ್ ಗೆ ಹಣ ಹಾಕಿರ್ತಾನೆ ಚೆಕ್ ಮಾಡಿ" ಅಜ್ಜ ಮೆಲ್ಲಗೆ ಹೇಳಿದಾಗ ಈ ಬಾರಿ ಕ್ಯಾಶಿಯರ್ ನ ಬಿಪಿ ಏರಿತ್ತು..

"ನೋಡಿ ಅಜ್ಜ ಆಗ ದಿಂದ ಹೇಳಿದ್ದೇ ಹೇಳುತ್ತೀರಲ್ವ, ತಲೆ ಸರಿ ಇಲ್ವಾ? ಮಗ ಹಣ ಹಾಕಿಲ್ಲ, ಅಕೌಂಟ್ ಅಲ್ಲಿ ಹಣ ಇಲ್ಲ.. ಎಲ್ಲೆಲ್ಲಿಂದ ಬರ್ತೀರಾ ನೀವೆಲ್ಲ ?"....ಈ ಬಾರಿ ಜೋರಾಗಿ ಕೂಗಿದ. ಆ ಸ್ವರ ಇಡೀ ಬ್ಯಾಂಕ್ ಗೆ ಪ್ರತಿಧ್ವನಿಸಿತ್ತು. ಎಲ್ಲರೂ ಆ ವೃದ್ದರನ್ನು ಅಸಹ್ಯವಾಗಿ ಕಂಡರು.

ವೃದ್ದರಿಗೂ ನಾಚಿಕೆಯಾಗಿದ್ದು, ಅಲ್ಲೇ ಸೈಡ್ ಗೆ ಹೋಗಿ ತಮ್ಮ ಮೊಬೈಲ್ ಅಲ್ಲಿ ಮಗನ ಸಂಖ್ಯೆಗೆ ಕಾಲ್ ಮಾಡುತಿದ್ದರು.. ಕಾಲ್ ತಾಗುತ್ತಿರಲಿಲ್ಲ😐.. ಕ್ಯಾಶಿಯರ್ ನ ಸಿಟ್ಟು ತಗ್ಗಿರಲಿಲ್ಲ. "ನೋಡಿ ಅಜ್ಜ ನಿಮ್ಮ ಹೋಂ ಲೋನ್ ಮುಗಿಯಲು 7 ಒಟ್ಟು ಕಂತು ಬಾಕಿ ಇದೆ, ಈಗಾಗಲೇ 2 ಕಂತು ಕಟ್ಟಿಲ್ಲ, ಮುಂದಿನ ತಿಂಗಳು ಕಟ್ಟದಿದ್ದಲ್ಲಿ ಮನೆ ಜಪ್ತಿ ಮಾಡುತ್ತೇವೆ ನೋಡಿ, ಆಗಲೇ ನಿಮ್ಮಂಥವರಿಗೆ ಬುದ್ದಿ ಬರುವುದು" ಎಂದ ಸಿಟ್ಟಲ್ಲಿ.

ಅಜ್ಜನ ಕಣ್ಣುಗಳು ಮಂಜಾಗಿದ್ದವು ಮತ್ತೆ ಮತ್ತೆ ಅದೇ ನಂಬರ್ ಗೆ ಕಾಲ್ ಮಾಡುತಿದ್ದರು ಅವರು 😐.. ಇದನ್ನೆಲ್ಲಾ ವೀಕ್ಷಿಸುತಿದ್ದ ಅದೇ ಬ್ಯಾಂಕಿನ ಸಹೋದ್ಯೋಗಿಯೊಬ್ಬರು ಅಜ್ಜನಲ್ಲಿ ಬಂದರು.. ಅಜ್ಜನನ್ನು ಪಕ್ಕಕ್ಕೆ ಕರೆಸಿ ಅಜ್ಜನಲ್ಲಿ ಮಗನ ನಂಬರ್ ಕೇಳಿ ತಮ್ಮ ಫೋನ್ ಅಲ್ಲಿ ರಿಂಗ್ ಮಾಡಿದಾಗ ಆಶ್ಚರ್ಯ ಎಂಬಂತೆ ಫೋನ್ ರಿಂಗ್ ಆಗಿತ್ತು.

ಹಲೋ ಎಂಬ ಹೆಂಗಸಿನ ಧ್ವನಿ ಅವರನ್ನು ಆಶ್ಚರ್ಯ ಗೊಳಿಸಿತ್ತು. ಅಜ್ಜ ಇದು ಮಗನ ನಂಬರ್ ಎಂದಿದ್ದರು. ತಕ್ಷಣ ಅವರು ಅಜ್ಜನ ವಿಷಯ ತಿಳಿಸಿದರು... ಆ ಹೆಂಗಸಿನ ಧ್ವನಿ ಬದಲಾಗಿತ್ತು ಆಕೆ ಅಳುತಿದ್ದಳು. ಒಂದು ಕ್ಷಣ ಸ್ತಬ್ದ ವಾಗಿದ್ದು. ಆಕೆ ಮುಂದುವರಿಸಿದಳು... "ಹಾ ನಾನು ರೂಪ, ಅವರು ನಮ್ಮ ಮಾವ.. ನನ್ನ ಗಂಡನ ತಂದೆ, ಅಲ್ಲಿ ಅವರ ಮನೆ ಕಟ್ಟಿದ್ದು, ತಂದೆ ತಾಯಿಯರನ್ನು ನೋಡಿ ಕೊಂಡಿದ್ದು, ಮನೆ ನೋಡಿ ಕೊಂಡಿದ್ದು, ಮನೆಯ ಹೋಂ ಲೋನ್ ಕಟ್ಟುತಿದ್ದದ್ದು ಎಲ್ಲವೂ ನನ್ನ ಗಂಡನೇ, ಆದರೆ ಕಳೆದ ತಿಂಗಳ ಹಿಂದೆ ನನ್ನ ಸಮು (ಸಮನ್ವಯ್ ).. ಬೈಕ್ ಆಕ್ಸಿಡೆಂಟ್ ಅಲ್ಲಿ ತೀರಿಕೊಂಡರು" 😢... ಆಕೆಯ ಅಳು ಜೋರಾಗಿತ್ತು... "ಜೀವನದ ಕೊನೆ ತನಕ ನನ್ನೊಂದಿಗೆ ಇರುತ್ತೇನೆ ಎಂದವರು ಅರ್ಧಕ್ಕೆ ನೆನಪುಗಳು ಹಾಗೂ ನೋವುಗಳನ್ನಷ್ಟೇ ಬಿಟ್ಟು ಹೊರಟು ಹೋದರು" ಎನ್ನುವಾಗ ಆಕೆಯ ಅಳು ಮತ್ತಷ್ಟು ಜೋರಾಗಿತ್ತು😢😢.... "ಹಾ ನಮ್ಮ ಮಾವನವರಿಗೆ ಅವರು ಒಬ್ಬನೇ ಮಗ, ಈಗ ಯಾರೂ ಇಲ್ಲ ಅವರಿಗೆ😢, ಮಗ ಸತ್ತದ್ದು, ಮಗ ಇಲ್ಲ ಎನ್ನುವುದು ಯಾವುದೂ ನೆನಪಿಲ್ಲ ಅವರಿಗೆ... ಪದೇ ಪದೇ ಮಗನ ನಂಬರ್ ಗೆ ಫೋನ್ ಮಾಡುತಿದ್ದರು, ನನ್ನ ಎಲ್ಲಾ ಚಿನ್ನ ಬ್ಯಾಂಕಲ್ಲಿಟ್ಟಿದ್ದರು, ಆ ಮನೆಯ ಲೋನ್ ತೀರಿಸಲು, ಕೇಳಿದರೆ ನಿನ್ನ ಚಿನ್ನ ನಾನೇ ಇದ್ದೀನಲ್ಲ ಎನ್ನುತಿದ್ದರು... ಈಗ ಅವರೂ ಇಲ್ಲ ಚಿನ್ನವೂ ಇಲ್ಲ 😢,ಕಳೆದ 14 ವರ್ಷಗಳಿಂದ ಒಂದೇ ಒಂದು EMI ತಪ್ಪಿಸಿರಲಿಲ್ಲ ಈಗ ಅವರೇ ಇಲ್ಲ, ರಾಣಿ ತರ ಇದ್ದ ನನ್ನ ಜೀವನ ಹಾಳಾಗಿದೆ, ನಾನೀಗ ಇಬ್ಬರು ಮಕ್ಕಳೊಂದಿಗೆ ತವರು ಮನೆಯಲ್ಲಿದ್ದೇನೆ, ನನ್ನ ಮುಂದೆ ಮಕ್ಕಳ ಹಾಗೂ ನನ್ನ ಭವಿಷ್ಯವಿದೆ ಹಾಗಾಗಿ ಮಾವನವರಿಗೆ ನಾನೇನೂ ಮಾಡಲಾಗುತ್ತಿಲ್ಲ, ಪದೇ ಪದೇ ಮಗನಿಗೆ ಕಾಲ್ ಕೊಡು ಎನ್ನುವಾಗ ಕರುಳು ಕಿತ್ತು ಬರುತಿತ್ತು, ಅದಕ್ಕೇ ಅವರ ನಂಬರ್ ಬ್ಲಾಕ್ ಮಾಡಿದ್ದೇನೆ" ಎನ್ನುವಾಗ ಆಕೆಯ ಅಳು ಮತ್ತಷ್ಟು ಹೆಚ್ಚಿತ್ತು. ಮತ್ತೆ ಮಾತಾಡುವ ಧೈರ್ಯ ಫೋನ್ ಮಾಡಿದವರಿಗೂ ಇರಲಿಲ್ಲ. ಅಷ್ಟರಲ್ಲಿ ಫೋನ್ ಕಟ್ ಆಗಿತ್ತು. ಆ ಸಹೋದ್ಯೋಗಿಯ ಕಣ್ಣಲ್ಲೂ ನೀರಿತ್ತು. ಫೋನ್ ಹಿಡಿದು ಮಾತನಾಡುತ್ತಾ ಹೊರಗೆ ಬಂದ ಆತ ಒಳ ಹೋಗುತಿದ್ದಂತೆ ಬಾಗಿಲ ಬಳಿ ಕಾಯುತಿದ್ದ ವೃದ್ದರು " ಮಗ ಏನಂದ? "ಎನ್ನುತಿದ್ದರು ತೀವ್ರ ಕುತೂಹಲದಿಂದ. "ಬನ್ನಿ ಸರ್" ಎಂದು ಅವರನ್ನು ತಮ್ಮ ಕೌಂಟರ್ ನತ್ತ ಕರೆದೊಯ್ದರು ಇವರು.

ಮತ್ತೆ ಅಜ್ಜ ಬ್ಯಾಂಕ್ ನತ್ತ ಬಂದದ್ದು ನೋಡಿ ಆ ಕ್ಯಾಶಿಯರ್ ಗೆ ಸಿಟ್ಟು ಉಕ್ಕುತಿತ್ತು... ಸಹೋದ್ಯೋಗಿ ಕೇಳಿದ ಅವನಲ್ಲಿ... "ಅಜ್ಜನ ಲೋನ್ ಸ್ಟೇಟ್ಮೆಂಟ್ ಕೊಡಿ"ಎಂದು.. ಅಜ್ಜ ಮತ್ತೆ ಕೇಳಿದರು "ಸರ್ ಮಗ ಏನಂದ?", ಈ ಬಾರಿ ಅವರ ಕಣ್ಣುಗಳಲ್ಲಿ ಆತಂಕವಿತ್ತು..

ಸ್ಟೇಟ್ಮೆಂಟ್ ಮೇಲೆ ಕಣ್ಣಾಡಿಸಿದ ಬ್ಯಾಂಕ್ ಸಹೋದ್ಯೋಗಿ..15 ಲಕ್ಷದ 15 ವರ್ಷದ ಲೋನ್ ಅದಾಗಿತ್ತು. 6 ತಿಂಗಳಷ್ಟೇ ಬಾಕಿ ಇತ್ತು, 2 ತಿಂಗಳು ಕಟ್ಟಿರಲಿಲ್ಲ. ಕ್ಯಾಲ್ಕುಲೇಟರ್ ಹಿಡಿದು ಲೆಕ್ಕ ಹಾಕಿದರು, ಬಡ್ಡಿ ಕೂಡಿ 98 ಸಾವಿರ ಅಷ್ಟೇ ಬಾಕಿ ಇತ್ತು... ನಗುತ್ತಾ ಅಜ್ಜನಲ್ಲಿ ಹೇಳಿದರು.. "ಅಯ್ಯೋ ಅಜ್ಜ ನಿಮ್ಮ ಮಗ ಈಗಷ್ಟೇ ಹಣ ಹಾಕಿದರು.. ನಿಮಗೆ ಇನ್ನೊಂದು ಗುಡ್ ನ್ಯೂಸ್ ಇದೆ ನಿಮ್ಮ ಬಾಕಿ ಇರುವ ಕಂತಿನ ಹಣವನ್ನು ಒಟ್ಟಾಗಿ ಹಾಕಿದ್ದಾನೆ, ನಿಮ್ಮ ಲೋನ್ ಕ್ಲೋಸ್ ಆಗಿದೆ, ನೀವಿನ್ನು ನಿಶ್ಚಿಂತೆಯಲ್ಲಿ ಮನೆಗೆ ಹೋಗಬಹುದು, ಲೋನ್ ಕ್ಲೀಯರೆನ್ಸ್ ಸರ್ಟಿಫಿಕೇಟ್ ಬ್ಯಾಂಕ್ ನಿಮ್ಮ ಮನೆಗೆ ಕಳಿಸುತ್ತದೆ".. ಎಂದಾಗ ಅಜ್ಜನ ಆತಂಕದ ಮುಖದಲ್ಲಿ ನಗುವಿತ್ತು ಕೈ ಮುಗಿದು ನಿಂತರು...ತುಂಬಾ "ಉಪಕಾರ ಆಯಿತು ಸರ್" ಎಂದಾಗ, "ಉಪಕಾರ ನನಗಲ್ಲ ನಿಮ್ಮ ಮಗನಿಗೆ ಹೇಳಿ" ಎಂದು ನಕ್ಕರು ಆ ಸಹೋದ್ಯೋಗಿ .. ಅಜ್ಜ ನ ಮುಖದಲ್ಲಿ ಗೆಲುವಿನ ನಗುವಿತ್ತು.

ಅಲ್ಲೇ ಇದ್ದ ಕ್ಯಾಶಿಯರ್ ಈ ಬಾರಿ, ಭಾರಿ ಸಿಟ್ಟಲ್ಲಿದ್ದ ತನ್ನ ಸಹೋದ್ಯೋಗಿ ಮೇಲೆ.. "ನಿಂಗೇನು ಹುಚ್ಚು ಹಿಡಿದಿದ, ಹಣ ಅವರ ಮಗ ಹಾಕೇ ಇಲ್ಲ" ಎಂದಾಗ ಕೂಲ್ ಅಲ್ಲಿ ಉತ್ತರಿಸಿದ ಈತ.. ಈ ಬಾರಿ ಪೂರ್ತಿ ಬ್ಯಾಂಕ್ ಸಹೋದ್ಯೋಗಿ ಗಳು ನೋಡುತ್ತಿದ್ದುದು ಒಳಗಿಂದ ಮ್ಯಾನೇಜರ್ ಕೂಡಾ ಕೇಳುತ್ತಿದ್ದುದು ಗೊತ್ತಿತ್ತು ಆತನಿಗೆ ಈ ಬಾರಿ ಆತನ ಸ್ವರ ಜೋರಾಗಿತ್ತು...

ಕಿಸೆಯಲ್ಲಿದ್ದ, 7000 ಟೇಬಲ್ ಮೇಲೆ ಇಟ್ಟಿದ್ದ ಈತ ಹೀಗೆ ಹೇಳಿದ "ನನಗೆ ಹುಚ್ಚು ಇದೆಯೋ ಇಲ್ಲವೋ ಗೊತ್ತಿಲ್ಲ ಆದರೆ ತೀರಿಹೋಗಿದ್ದ ಮಗ ಇದ್ದಾನೆಂದು ಭಾವಿಸಿ,ಆ ತಂದೆ ಮಗನ ಮೇಲೆ ಇಟ್ಟಿರುವ ವಿಶ್ವಾಸವನ್ನು ಆ ಕ್ಷಣದಲ್ಲಿ ಉಳಿಸುವುದು, ಆ ತಂದೆಯ ಕಣ್ಣುಗಳಲ್ಲಿ ಇದ್ದ ಆಸೆಯನ್ನು ಹಾಗೇ ಉಳಿಸುವುದಷ್ಟೇ ಆ ಸಂದರ್ಭದಲ್ಲಿ ನನ್ನೆದುರಿದ್ದ ಸವಾಲಾಗಿತ್ತು, ಯಾಕೆಂದರೆ ಆತ ನನ್ನೆದುರು ಕೇವಲ ಒಬ್ಬ ತಂದೆಯಾಗಿದ್ದ, ಯಾರ ತಂದೆ ಎನ್ನುವುದು ಮುಖ್ಯವಾಗಿರಲಿಲ್ಲ, ಮಗನ ಮೇಲಿಟ್ಟಿದ್ದ ಆ ವಿಶ್ವಾಸ ಉಳಿಸಿದ್ದು ಅದಕ್ಕೇ ಪ್ರತಿಯಾಗಿ ಆ ತಂದೆಯ ಕಣ್ಣಲ್ಲಿದ್ದ ಆ ಸಂತೋಷದೆದುರು, ಲಕ್ಷ ರೂಪಾಯಿ ಬಹಳ ಚಿಕ್ಕದಾಗಿತ್ತು ನನಗೆ, ನಾನು ಮಾಡಿದ ಕೆಲಸದಿಂದ ನಂಗೆ ಸಿಕ್ಕಿದ ನೆಮ್ಮದಿ ಬಹುಶಃ ಕೋಟಿ ರೂಪಾಯಿ ಸಿಕ್ಕಿದ್ದರೂ ನನಗೆ ಸಿಗಲು ಸಾಧ್ಯವೇ ಇಲ್ಲ ಎನ್ನಿಸಿತ್ತು" ಎಂದವನೇ ಮಿಕ್ಕುಳಿದ 90,000 ದ ಚೆಕ್ ಕೊಡಲು, ಚೆಕ್ ಬುಕ್ ತರಲು ಹೊರಗಡೆ ಹೋದ.. ಆತ ಚೆಕ್ ಪುಸ್ತಕ ತರುವಾಗ 20-22 ಜನರಿರುವ ಬ್ಯಾಂಕ್ ನ ಎಲ್ಲಾ ಸಿಬ್ಬಂದಿಗಳು ಎದ್ದು ನಿಂತು ಚಪ್ಪಾಳೆ ಹೊಡೆಯುತ್ತಿದ್ದರು. ಅಲ್ಲಿ, ಅಷ್ಟರಲ್ಲಿ ಅವನ ಟೇಬಲ್ ಮೇಲೆ ಒಂದಷ್ಟು ಹಣ ತಂದು ಇಟ್ಟಿದ್ದರು ಸಿಬ್ಬಂದಿಗಳು. ಲೆಕ್ಕ ಮಾಡಿದ 17 ಜನ ಸಿಬ್ಬಂದಿಗಳು ಒಟ್ಟು ಬರೋಬ್ಬರಿ 73,000ರೂ ಇಟ್ಟಿದ್ದರು, ಅಷ್ಟರಲ್ಲಿ ಆಗ ವೃದ್ಧರಿಗೆ ಬೈದಿದ್ದ ಕ್ಯಾಶಿಯರ್ 7000 ಕೊಟ್ಟಿದ್ದ, ಆಗ ಅಸಹಾಯಕ ವೃದ್ಧರಿಗೆ ಬೈದಿದ್ದ ಅವನ ಕಣ್ಣಲ್ಲಿ ಪಶ್ಚತ್ತಾಪದ ಕಣ್ಣೀರಿತ್ತು.

ಒಟ್ಟು ತನ್ನ 7000 ಕೂಡಿ 87000 ಸಂಗ್ರಹ ವಾಗಿತ್ತು, ಚೆಕ್ ತೆರೆದು ಉಳಿದ 11,000 ಬರೆಯಲು ಪೆನ್ನು ತೆಗೆದವನ ಹೆಗಲ ಮೇಲೆ ಕೈಯೊಂದು ಬಂತು, ತಿರುಗಿ ನೋಡಿದ ಅಲ್ಲಿ ಬ್ರಾಂಚ್ ಮ್ಯಾನೇಜರ್ ನಿಂತಿದ್ದರು, "ನನ್ನನ್ನು ಬಿಟ್ಟು ನೀವೇ ಎಲ್ಲಾ ಪುಣ್ಯ ಹಂಚಿಕೊಂಡರೆ ಹೇಗೆ ?ನನ್ನದೂ ಸ್ವಲ್ಪ ಪುಣ್ಯ ಇರಲಿ ಎಂದವರೇ 11,000 ಕೊಟ್ಟು ಚೆಕ್ ಪುಸ್ತಕ ಮಡಚಿ ಅವನ ಕಿಸೆಯೊಳಗೆ ಇಟ್ಟು ಬಿಟ್ಟರು.. "ಒಟ್ಟಿನಲ್ಲಿ ಆ ತಂದೆ ಮಗನ ಮೇಲೆ ಇಟ್ಟಿದ್ದ ವಿಶ್ವಾಸವನ್ನು ಎಲ್ಲಾ ಒಟ್ಟಾಗಿ ಉಳಿಸಿ ಬಿಟ್ಟಿದ್ದರು..."

“ಸಹಾಯ ಮಾಡುವ ಅವಕಾಶ ಭಗವಂತ ಪ್ರತಿಯೊಬ್ಬನಿಗೂ ಒದಗಿಸುತ್ತಾನೆ ಆ ಕ್ಷಣ ಉಪಯೋಗಿಸಿಕೊಂಡವನಿಷ್ಟೇ ಅದರ ನಿಜ ಸುಖದ ಅನುಭವವಾಗಲಿದೆ” ಇಲ್ಲಿ ಆ ಬ್ಯಾಂಕ್ ಸಹೋದ್ಯೋಗಿಗಳಿಗೆ ಆ ಕ್ಷಣ ಒದಗಿದೆ.

ದಯವಿಟ್ಟು ನಿಮ್ಮ ಬ್ಯಾಂಕ್ ಗೆ ಬರುವ ಹಿರಿಯ ಜೀವಗಳಿಗೆ ನಿರಾಸೆ ಮಾಡಬೇಡಿ, ಅವಮಾನ ಮಾಡಲೇಬೇಡಿ. ಯಾಕೆಂದರೆ, ನಿಮ್ಮಲ್ಲಿ ಬರುವ ಹಿರಿಯ ಜೀವಗಳಿಗೆ ನೀವು ಕೊಡುವ ಆ ಹಣದ ಅವಶ್ಯಕತೆ ಅದೆಷ್ಟು ಇರುತ್ತದೋ ಯಾರಿಗೆ ಗೊತ್ತು ಅಲ್ಲವೇ?.....

ಆತ ಕೊಳೆಯಾದ ಅಂಗಿ, ಕೊಳೆಯಾದ ಪ್ಯಾಂಟ್, ಪೈಜಾಮ, ಲುಂಗಿ, ಹರಿದ ಚಪ್ಪಲಿ, ಚಪ್ಪಲಿ ಇಲ್ಲದ ಕಾಲು, ಹೇಗೇ ಬಂದಿರಲಿ ಪ್ರೀತಿಯಿಂದ ಸೌಜನ್ಯದಿಂದ ಮಾತಾಡಿ.. ಫಾರಂ ಫಿಲ್ ಮಾಡಲು ನೆರವಾಗಿ... ಯಾಕೆಂದರೆ.... "ನೆನಪಿರಲಿ...."

ಯಾರದ್ದಾದರೇನು ? ತಂದೆ..ತಂದೆಯೇ ಅಲ್ಲವೇ??

## ಡಾ. ವಿಶ್ವನಾಥ ಕಾರ್ನಾಡ್ ಪ್ರತಿಷ್ಠಾನ, ಮುಂಬಯಿ

## ಶ್ಯಾಮಲಾ, ದಿನೇಶ್ ಹಾಗೂ ಅಮಿತಾ ಅವರಿಗೆ 'ವಿಕಾಸ' ಪುಸ್ತಕ ಬಹುಮಾನ



ಹಿರಿಯ ಸಾಹಿತಿ, ಲೇಖಕ, ಪ್ರಾಧ್ಯಾಪಕ ವಿಶ್ವನಾಥ ಕಾರ್ನಾಡ್ ಅವರ ಹೆಸರಿನಲ್ಲಿ ಅಸ್ತಿತ್ವಕ್ಕೆ ಬಂದಿರುವ ಡಾ.ವಿಶ್ವನಾಥ ಕಾರ್ನಾಡ್ ಪ್ರತಿಷ್ಠಾನವು ಮುಂಬೈಯಲ್ಲಿ ಕನ್ನಡ ಪುಸ್ತಕ ಸಂಸ್ಕೃತಿಯನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಪುಸ್ತಕ ಬಹುಮಾನ ಯೋಜನೆಯನ್ನು ರೂಪಿಸಿದ್ದು 2022-23ರ ಸಾಲಿನ 'ವಿಕಾಸ' ಪುಸ್ತಕ ಬಹುಮಾನಕ್ಕೆ ಡಾ.ಶ್ಯಾಮಲಾ ಪ್ರಕಾಶ್, ಡಾ.ದಿನೇಶ ಶೆಟ್ಟಿ, ರೆಂಜಾಳ ಹಾಗೂ ಅಮಿತಾ ಭಾಗ್ವತ್ ಅವರ ಕೃತಿಗಳು ಆಯ್ಕೆಯಾಗಿವೆ. ಇತ್ತೀಚೆಗೆ ಕಾರ್ನಾಡ್ ಪ್ರತಿಷ್ಠಾನದ ಅಧ್ಯಕ್ಷರಾದ ಡಾ.ಜಿ.ಎನ್.ಉಪಾಧ್ಯ ಅವರ ನೇತೃತ್ವದಲ್ಲಿ ನಡೆದ ಆಯ್ಕೆ ಸಮಿತಿಯ ಸಭೆಯಲ್ಲಿ ಸರ್ವಾನುಮತದಿಂದ ಈ ಕೃತಿಗಳನ್ನು ಆಯ್ಕೆ ಮಾಡಲಾಗಿದ್ದು, ಪ್ರತಿಷ್ಠಾನದ ಪರವಾಗಿ ಡಾ.ವಿಶ್ವನಾಥ ಕಾರ್ನಾಡ್ ಅವರು ಸಲಹೆ ಸೂಚನೆಗಳನ್ನು ನೀಡಿದರು.





ಡಾ.ಶ್ಯಾಮಲಾ ಪ್ರಕಾಶ್ ಅವರ 'ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಸಂಗೀತದ ಸಾಹಚರ್ಯ'(ಶೋಧಕೃತಿ), ಡಾ.ದಿನೇಶ ಶೆಟ್ಟಿ ಅವರ 'ಮುಂಬಯಿ ಕನ್ನಡ ಪತ್ರಿಕೋದ್ಯಮ'(ಶೋಧ ಕೃತಿ), ಅಮಿತಾ ಭಾಗ್ವತ್ ಅವರ 'ನೀಲಿನಕ್ಷೆ'(ಕಾದಂಬರಿ) ಕೃತಿಗಳು ಈ ಬಾರಿಯ ಬಹುಮಾನಕ್ಕೆ ಆಯ್ಕೆಯಾಗಿವೆ ಎಂಬುದಾಗಿ ಪ್ರತಿಷ್ಠಾನದ ಕಾರ್ಯದರ್ಶಿ ಡಾ.ಪೂರ್ಣಿಮಾ.ಎಸ್.ಶೆಟಿ ್ಟಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಈ ಬಹುಮಾನ ನಗದು ಪುರಸ್ಕಾರ, ಪ್ರಶಸ್ತಿ ಪತ್ರ ಹಾಗೂ ಗ್ರಂಥ ಗೌರವವನ್ನು ಒಳಗೊಂಡಿದ್ದು ಡಿಸೆಂಬರ್ 23ರಂದು ಅಂಧೇರಿಯಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಬಹುಮಾನವನ್ನು ಪ್ರದಾನ ಮಾಡಲಾಗುವುದು ಎಂದು ಪ್ರತಿಷ್ಠಾನದ ಪ್ರಕಟಣೆ ತಿಳಿಸಿದೆ.

## ವಿದ್ಯಾ ರಾಮಕೃಷ್ಣ ಅವರಿಗೆ "ವ್ಯಾಸರಾಯ ಬಲ್ಲಾಳ ಅತ್ಯುತ್ತಮ ವಿದ್ಯಾರ್ಥಿ" ಪುರಸ್ಕಾರ.

ಮುಂಬೈ ವಿಶ್ವವಿದ್ಯಾನಿಲಯ, ಕನ್ನಡ ವಿಭಾಗದ ಎಂ. ಎ. ದ್ವಿತೀಯ ವರ್ಷದಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾ ರಾಮಕೃಷ್ಣ ಅವರು 'ವ್ಯಾಸರಾಯ ಬಲ್ಲಾಳ ಅತ್ಯುತ್ತಮ ವಿದ್ಯಾರ್ಥಿ ಪುರಸ್ಕಾರ'ಕ್ಕೆ ಆಯ್ಕೆಯಾಗಿದ್ದಾರೆ.




ಹೊರನಾಡಾದ ಮುಂಬೈಯಲ್ಲಿ ನೆಲೆಸಿ ಐದು ದಶಕಗಳಿಗಿಂತಲೂ ಹೆಚ್ಚು ಕಾಲ ಕನ್ನಡ ಸಾಹಿತ್ಯವನ್ನು ವಿಭಿನ್ನ ನೆಲೆಗಳಲ್ಲಿ ಬಲಗೊಳಿಸಿದ ಸಾಹಿತಿ ವ್ಯಾಸರಾಯ ಬಲ್ಲಾಳ ಅವರ ಶತಮಾನೋತ್ಸವದ ನೆನಪಿಗೆ ಮುಂಬೈ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಯೊಬ್ಬರಿಗೆ ಅತ್ಯುತ್ತಮ ವಿದ್ಯಾರ್ಥಿ ಪುರಸ್ಕಾರ ನೀಡುವ ಉಪಕ್ರಮ ಆರಂಭವಾಗಿದ್ದು ಪ್ರಸ್ತುತ ಸಾಲಿನ ಈ ಪುರಸ್ಕಾರಕ್ಕೆ ವಿದ್ಯಾ ಅವರನ್ನು ಆಯ್ಕೆ ಮಾಡಲಾಗಿದೆ. ಈ ಪುರಸ್ಕಾರವು ನಗದು ಬಹುಮಾನ, ಕೃತಿ ಕರಂಡಕ ಮತ್ತು ಸ್ಮರಣಿಕೆಯನ್ನು ಒಳಗೊಂಡಿರುತ್ತದೆ.

ವಿದ್ಯಾ ಅವರು ಕುವೆಂಪು ವಿಶ್ವವಿದ್ಯಾಲಯದಿಂದ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ವಿಷಯದಲ್ಲಿ ತಾಂತ್ರಿಕ ಪದವಿ ಪಡೆದು ಸುಮಾರು ಎರಡು ದಶಕಗಳ ಕಾಲ ಐ.ಟಿ ಕ್ಷೇತ್ರದಲ್ಲಿ ವಿವಿಧೆಡೆ ಕಾರ್ಯ ಸಲ್ಲಿಸಿ ಸ್ವಯಂ ನಿವೃತ್ತಿ ಪಡೆದಿದ್ದಾರೆ. ಸಾಹಿತ್ಯಾಸಕ್ತಿಯಿಂದ ಇದೀಗ ಕನ್ನಡ ಸ್ನಾತಕೋತ್ತರ ಅಧ್ಯಯನದಲ್ಲಿ ತೊಡಗಿಕೊಂಡ ಇವರು, 'ಶಿವರಾಮ ಕಾರಂತರ ಪ್ರಬಂಧಗಳು - ಒಂದು ಅಧ್ಯಯನ' ಎಂಬ ಸಂಪ್ರಬಂಧವನ್ನು ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿ, 'ಕುವೆಂಪು ಮತ್ತು ಕಾರಂತರ ಆತ್ಮಕಥೆಗಳು - ಒಂದು ಅಧ್ಯಯನ' ಎಂಬ ಮತ್ತೊಂದು ಸಂಪ್ರಬಂಧದ ರಚನೆಯಲ್ಲಿ ನಿರತರಾಗಿದ್ದಾರೆ. ಈ ಪುರಸ್ಕಾರವನ್ನು ಡಿಸೆಂಬರ್ 1 ರಂದು ಮುಂಬೈ ವಿಶ್ವ ವಿದ್ಯಾಲಯದಲ್ಲಿ ಪ್ರದಾನ ಮಾಡಲಾಗುವುದೆಂದು ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಜಿ. ಎನ್. ಉಪಾಧ್ಯ ಹಾಗೂ "ವ್ಯಾಸರಾಯ ಬಲ್ಲಾಳ ಪ್ರತಿಷ್ಠಾನ"ದ ಸಂಚಾಲಕ ಅರವಿಂದ ಬಲ್ಲಾಳ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಂಗ್ರಹ ಯೋಗ್ಯ ಕೃತಿ - ಸೂರಿ ಪರ್ವ

**ಕಲಾ ಭಾಗ್ವತ್**

ಸಾಹಿತ್ಯ ಎನ್ನುವುದು ಪ್ರತಿಯೊಬ್ಬರಲ್ಲಿಯೂ ಇದೆ, ಸಾಹಿತ್ಯವು ಸರ್ವರ ಹಿತಕ್ಕಾಗಿ ಇದೆ ಇಂತಹ ಹತ್ತು ಹಲವು ವ್ಯಾಖ್ಯಾನಗಳು, ಹೇಳಿಕೆಗಳು ಬರೆವಣಿಗೆ ಭಾಷಣಗಳು ಇಂದಿನ ದಿನಗಳಲ್ಲಿ ಸರ್ವೇಸಾಮಾನ್ಯವಾಗಿವೆ. ಹೀಗಿರುವಾಗ ಸಾಹಿತ್ಯದ ಪ್ರಕಾರಗಳನ್ನು ಒಟ್ಟಿಗೆ ತಂದು ವಿಭಾಗಿಸಿ ಸೃಜನಶೀಲ, ಸೃಜನೇತರ ಎಂದು ಇಬ್ಭಾಗ ಮಾಡಿ ಒಂದು ಶ್ರೇಷ್ಠ, ಇನ್ನೊಂದು ಕನಿಷ್ಠ ಎನ್ನುವ ವಿಚಾರಗಳು ಅಕ್ಷರಶಃ ಸರಿ ಎಂದು ಒಪ್ಪಬೇಕಾದ ಅವಶ್ಯಕತೆ ಪ್ರಸ್ತುತದಲ್ಲಿ ಇಲ್ಲ. ಏಕೆಂದರೆ ಈ ಎರಡೂ ಬಗೆಗಳೂ ಓದು, ಬರವಣಿಗೆಗಳಿಂದಲೇ ರೂಪುಗೊಂಡಿವೆ. ಇಲ್ಲಿ ಓದು ಎನ್ನುವುದನ್ನು ಗಣನೆಗೆ ತೆಗೆದುಕೊಂಡರೆ ಯಾವುದರ ಓದು? ಎಷ್ಟರ ಮಟ್ಟಿನ ಓದು? ಹೇಗೆ ಓದು? ಈ ಎಲ್ಲ ಕೋನಗಳಲ್ಲಿ ಪ್ರಶ್ನೆ ಇಟ್ಟಾಗ ಜೀವನ ಮತ್ತು ಸಂಸ್ಕೃತಿಯ ಹಲವು ಮಜಲುಗಳಿಗೆ ಕನ್ನಡ ಭಾಷೆ ತೆರವಾಗಿರುವುದನ್ನು ಇಂದು ಕಾಣಬಹುದು. ನಿರ್ದಿಷ್ಟ ಪ್ರಕಾರಗಳು ಮಾತ್ರವೇ ರಚನೆಯಾಗುತ್ತಲಿದ್ದರೆ ಕನ್ನಡ ಸಾಹಿತ್ಯದ ಏಳ್ಗೆ ಕುಂಠಿತವಾಗುತ್ತದೆ. ಅದರಲ್ಲೂ ಹೊರನಾಡಿನಲ್ಲಿ ಇದರ ಸಾಧ್ಯತೆ ಇನ್ನೂ ಹೆಚ್ಚು.ಇದನ್ನು ಗಮನದಲ್ಲಿಟ್ಟುಕೊಂಡು ಮುಂಬೈ ವಿಶ್ವವಿದ್ಯಾಲಯ ಕನ್ನಡ ವಿಭಾಗವು ಮುಂಬೈ ವಲಯದ ಸಾಧಕರ ಸಾಧನೆಯು ಮರೆವಾಗದಂತೆ ದಾಖಲಿಸಿ ಪ್ರಕಟಿಸುವ ಕೆಲಸವನ್ನು ಜವಾಬ್ದಾರಿಯುತವಾಗಿ ಮಾಡುತ್ತಲಿದೆ. ವಿದ್ಯಾರ್ಥಿಗಳನ್ನು ಎಲ್ಲ ಬಗೆಯ ಓದು ಬರವಣಿಗೆಯಲ್ಲಿ ತೊಡಗಿಕೊಳ್ಳುವಂತೆ ಪ್ರೋತ್ಸಾಹ, ಮಾರ್ಗದರ್ಶನವನ್ನು ನೀಡುತ್ತಲಿದೆ. ಎಂ ಎ. ವಿದ್ಯಾರ್ಥಿಗಳು ಯೋಜನಾಕಾರ್ಯದ ಅಂಗವಾಗಿ ಶೋಧ ಸಂಪ್ರಬಂಧವನ್ನು ರಚಿಸುವುದು ಇಲ್ಲಿನ ಪಠ್ಯದ ಭಾಗವಾಗಿದೆ. ಅದರ ಉತ್ಪನ್ನವಾಗಿ ಹೊರ ಬಂದ ಕೃತಿ 'ಸೂರಿ ಪರ್ವ'. ಈ ಕೃತಿಯನ್ನು ಶಶಿಕಲಾ ಹೆಗಡೆಯವರು ಎಂ.ಎ ಅಧ್ಯಯನದ ಸಂದರ್ಭದಲ್ಲಿ ಡಾ. ಜಿ. ಎನ್ ಉಪಾಧ್ಯ ಅವರ ಮಾರ್ಗದರ್ಶನದಲ್ಲಿ ರಚಿಸಿದ್ದಾರೆ.




ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮೂರು ಮೊದಲುಗಳ ಹರಿಕಾರರಾಗಿ ಅಜರಾಮರವಾಗಿ ಇರಬೇಕಾದ ಹೆಸರು ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ ಅವರದು. ಹತ್ತೊಂಬತ್ತನೆಯ ಶತಮಾನದ ಕೊನೆಯಲ್ಲಿ ಜೀವಿಸಿದ್ದರು ಎನ್ನಲಾಗುವ ಕ. ವೆಂ ಶಾಸ್ತ್ರಿಯವರ ಹೆಸರಿನ ಮುಂದೆ ಇರುವ 'ಸೂರಿ' ಎನ್ನುವುದು ಅವರ ಮನೆತನದ ಹೆಸರು. ಅವರನ್ನು ಪೂರ್ವ ಸೂರಿ ಎಂದು ಸಂಬೋಧಿಸುವುದಕ್ಕೂ ಇದು ಅತ್ಯಂತ ಯೋಗ್ಯವಾಗಿದೆ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅವರನ್ನು ಕಡೆಗಣಿಸಿದರೂ ಕೂಡ ಅವರ ಕುರಿತಾಗಿ ಮುಖ್ಯವಾಗಿ ಅವರ ಸಮುದಾಯದವರು(ಹವ್ಯಕರು) ಸಂಕಲಿಸಿದ ಪುಸ್ತಕಗಳು ಈಗಾಗಲೇ ಅಲ್ಲಲ್ಲಿ ಪ್ರಕಟವಾಗಿವೆ. ಅವೆಲ್ಲವನ್ನೂ ಒತ್ತಟ್ಟಿಗೆ ತಂದು ಸಂಕಲಿಸಿ, ಅವರು ರಚಿಸಿದ, ಸಂಪಾದಿಸಿ ಕೊಟ್ಟ ಕೃತಿಗಳನ್ನು ವಿಶ್ಲೇಷಣೆಗೆ ಒಳಪಡಿಸಿ ಅನೇಕ ಒಳ ನೋಟಗಳನ್ನು ಕೊಟ್ಟು ಒಟ್ಟಾರೆ ಜೀವನ ಸಾಧನೆಯನ್ನು ಅರ್ಥಪೂರ್ಣವಾಗಿ ಕಟ್ಟಿಕೊಟ್ಟಿರುವ 'ಸೂರಿ ಪರ್ವ' ಚರಿತ್ರೆಯ ಅಧ್ಯಯನಕಾರರಿಗೆ ಹಲವು ಬಗೆಯಲ್ಲಿ ಅನುಕೂಲಕರವಾಗಿದೆ. ಇಲ್ಲಿಯ ತನಕ ಲಭ್ಯವಿರುವ ಅವರ ಎಲ್ಲ ಮಾಹಿತಿಗಳು ಈ ಕೃತಿಯಲ್ಲಿ ಒಟ್ಟಾಗಿ ಸಿಗುವುದರಿಂದ ಇದೊಂದು ಆಕರ ಗ್ರಂಥವೂ ಹೌದು.

ಕರ್ಕಿ ಸೂರಿ ವೆಂಕಟರಮಣ ಶಾಸ್ತ್ರಿಯವರ ಕುರಿತು ಲಭ್ಯವಿರುವ ಆಕರಗಳನ್ನು ಪರಿಶೀಲಿಸಿ ಅವರ ಜೀವನ ಸಾಧನೆಯನ್ನು ಒಟ್ಟು ಆರು ಅಧ್ಯಾಯಗಳ ಅಡಿಯಲ್ಲಿ ಇಲ್ಲಿ ವಿವರಿಸಲಾಗಿದೆ. ಅವುಗಳಲ್ಲಿ ಶಕಪುರುಷ ನಡೆದ ದಾರಿ, ಲೇಖನಿಯ ಸಾಧಕ, ಗ್ರಂಥ ಸಂಪಾದನೆಯ ಸಾಹಸ, ಪತ್ರಿಕೋದ್ಯಮದಲ್ಲಿ ದಿಟ್ಟ ಹೆಜ್ಜೆ ಈ ಭಾಗಗಳು ಅನೇಕ ಮುಖ್ಯ ವಿಚಾರಗಳನ್ನು ತಿಳಿಸಿಕೊಡುತ್ತವೆ. ಕೊನೆಗೆ ಅನುಬಂಧದಲ್ಲಿ ಅಳವಡಿಸಿರುವ ಶಾಸ್ತ್ರಿ ರಚಿತ ಹಿತೋಪದೇಶದ ವಚನಗಳು, 'ಇಗ್ಗಪ್ಪ ಹೆಗಡೆ

ವಿವಾಹ ಪ್ರಹಸನ' ನಾಟಕದ ಮೂಲ , ಶಾಸ್ತ್ರಿಗಳು ಪ್ರಕಟಿಸಿದ ವ್ಯಂಗ್ಯ ಚಿತ್ರಗಳು ಇವೆಲ್ಲ ಯೋಗ್ಯ ಆಕರಗಳ ಸಂಗ್ರಹವು ಕೃತಿಗೆ ತೂಕ ನೀಡಿವೆ.

ಅನೇಕ ಸನ್ನಿವೇಶಗಳ ಮೂಲಕ ವೆಂಕಟರಮಣ ಶಾಸ್ತ್ರಿಯವರ ಕಾರ್ಯನಿಷ್ಠೆ, ದಣಿವರಿಯದ ಚೈತನ್ಯ, ಚಟುವಟಿಕೆ, ಆತ್ಮೀಯರೊಡನೆ ಅವರು ನಡೆಸುತ್ತಿದ್ದ ಚರ್ಚೆ, ಅವರಿಗೆ ಪ್ರವಾಸ ಪರ್ಯಟನಗಳಲ್ಲಿರುವ ಅಭಿರುಚಿ, ಹೊಸತನ್ನು ಸಾಧಿಸುವ ಹಂಬಲ, ಕನ್ನಡ ಭಾಷೆ, ಸಾಹಿತ್ಯದ ಕುರಿತಾಗಿ ಅವರಿಗಿರುವ ಅಭಿಮಾನ, ಹವ್ಯಕ ಸಮಾಜದ ಬಗೆಗಿನ ಕಳಕಳಿ, ಅವರ ಮುಂಬೈ ಬದುಕು, ಬ್ರಿಟಿಷ್ ಸರ್ಕಾರದ ಅನ್ಯಾಯದ ವಿರುದ್ಧ ಅವರು ಮಾಡಿದ ಹೋರಾಟ, ರಚಿಸಿದ, ಸಂಪಾದಿಸಿದ ಕೃತಿಗಳು, ಅವರು ಆರಂಭಿಸಿದ ಭಾರತಿ ಛಾಪಖಾನೆಯ ಬಗೆಗಿನ ವಿವರ, ಪ್ರಕಟಿಸಿದ ಹವ್ಯಕ ಸುಭೋದ (ವಾರ ಪತ್ರಿಕೆ)ಹಾಗೂ ಹಿತೋಪದೇಶ ( ಮಾಸ ಪತ್ರಿಕೆ) ಎನ್ನುವ ಪತ್ರಿಕೆಗಳ ಕಿರು ವಿವರ, ಅನುಭವಿಸಿದ ಕಾರಾಗೃಹ ವಾಸ, ಕುಟುಂಬದ  ವಿವರ, ಶಾಸ್ತ್ರಿಯವರ ಹಾಸ್ಯ ಪ್ರಜ್ಞೆ  ಇವೆಲ್ಲವೂ 'ಶಕಪುರುಷ ನಡೆದ ದಾರಿ'ಎಂಬ ಅಧ್ಯಾಯದಡಿಯಲ್ಲಿ ಅಡಕವಾಗಿವೆ.

'ಲೇಖನಿಯ ಸಾಧಕ' ಅಧ್ಯಾಯದಲ್ಲಿ ಅವರು ರಚಿಸಿದ ಗ್ರಂಥವಾದ 'ದಕ್ಷಿಣ ಯಾತ್ರಾ ಚರಿತ್ರೆ' ಯ ಕುರಿತು ಕೆಲವು ಮಾಹಿತಿಗಳು, 'ಇಗ್ಗಪ್ಪ ಹೆಗಡೇ ವಿವಾಹ ಪ್ರಹಸನ ಅಥವಾ ಕನ್ಯಾ ವಿಕ್ರಯದ ಪರಿಣಾಮವು' ಕೃತಿಯ ವಿವರವಾದ ಚರ್ಚಾತ್ಮಕ ವಿಶ್ಲೇಷಣೆಯಿದೆ. 'ಪ್ರಾಚೀನ ನಾಟ್ಯ ಕಥಾರ್ಣವ'ದಲ್ಲಿ ಪ್ರಾಚೀನ ಸಂಸ್ಕೃತ ನಾಟಕಗಳನ್ನು ಕತೆಗಳನ್ನಾಗಿ ಪರಿವರ್ತಿಸಿ ಅತ್ಯಂತ ಸರಳವಾದ ಭಾಷೆಯಲ್ಲಿ ಓದುಗರಿಗೆ ಅಪ್ಯಾಯಮಾನವಾಗುವ ರೀತಿಯಲ್ಲಿ ಕಟ್ಟಿಕೊಟ್ಟಿದ್ದಾರೆ, ಇದರಲ್ಲಿ ಎರಡು ಕಥೆಗಳು, ಎರಡು ನಾಟಿಕೆಗಳು ಇವೆ ಎಂಬುದನ್ನು ಲೇಖಕರು ವಿಷದ ಪಡಿಸಿದ್ದಾರೆ. ಅನಾರ್ಯರ ವಿವರ ಕೃತಿಯ ವಿಶೇಷತೆಯ  ಕುರಿತಾಗಿಯೂ ಇಲ್ಲಿ ಹೇಳಲಾಗಿದೆ.

ಶಾಸ್ತ್ರಿಯವರು ಸಂಪಾದಿಸಿದ ಗ್ರಂಥಗಳ ವಿವರವನ್ನು ನೀಡುವಾಗ ಅವರೊಬ್ಬ ನುರಿತ ಸಂಪಾದಕರಾಗಿದ್ದರು ಎಂಬುದನ್ನು ದೃಢಪಡಿಸಿದ್ದಾರೆ. ಅದರ ಹೊರತಾಗಿ ಶಾಸ್ತ್ರಿಯವರು ಸಂಗ್ರಹಿಸಿದ ಹಸ್ತಪ್ರತಿಗಳ, ಪರಿಷ್ಕರಿಸಿದ ತಾಮ್ರ ಶಾಸನಗಳ, ಸನದುಗಳನ್ನು ಪ್ರಕಟಿಸಿರುವದರ ಉಲ್ಲೇಖವೂ ಇದೆ.

ಮುಂಬಯಿಯಲ್ಲಿದ್ದುಕೊಂಡು ಪತ್ರಿಕೋದ್ಯಮದಲ್ಲಿ ದಿಟ್ಟ ಹೆಜ್ಜೆಯನ್ನಿಟ್ಟು ಬ್ರಿಟಿಷರ ಅನೇಕ ಪ್ರಕರಣಗಳನ್ನು ಬಯಲು ಮಾಡಿದ ಧೀರ ಪತ್ರಿಕೋದ್ಯಮಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಕ. ವೆಂ. ಶಾಸ್ತ್ರಿಯವರು ಆ ಮೂಲಕ ಮಾಡಿದ ಸುಧಾರಣ ಕಾರ್ಯಗಳ ಮೇಲೆ ಬೆಳಕು ಹಾಯಿಸುವ ಕೆಲಸವನ್ನು ಈ ಕೃತಿಯಲ್ಲಿ ಲೇಖಕರು ಮಾಡಿದ್ದಾರೆ. ಸಮಾರೋಪದಲ್ಲಿ ಅವರ ಜೀವನ ಸಾಧನೆಯನ್ನು ಸ್ಪಷ್ಟವಾಗಿ ಗುರುತಿಸಿ ಜೋಡಿಸಿರುವುದು ಲೇಖಕರ ಶೋಧನ ಪ್ರವೃತ್ತಿಗೆ ಸಾಕ್ಷಿಯಾಗಿದೆ.

"ಪತ್ರಿಕೋದ್ಯಮ, ಮುದ್ರಣ ಕಾರ್ಯ, ಸಾಹಿತ್ಯ, ಗ್ರಂಥ ಸಂಪಾದನೆ ಮೊದಲಾದವುಗಳನ್ನು ತಮ್ಮ ಕಾರ್ಯಕ್ಷೇತ್ರಗಳನ್ನಾಗಿ ಮಾಡಿಕೊಂಡು ಕನ್ನಡದ ಏಳಿಗೆಗೆ ಗಂಧದ ಕೊರಡಿನಂತೆ ತೇದಿಕೊಂಡ ಕ. ವೆಂ. ಶಾಸ್ತ್ರಿಅವರು ಬರೇ ಆದ್ಯ ಸಾಮಾಜಿಕ ನಾಟಕಕಾರರಷ್ಟೇ ಅಲ್ಲ, ಅವರೊಬ್ಬ ಘನ ವಿದ್ವಾಂಸ, ಸಾಹಸಿ ಮುದ್ರಣಕಾರ, ಧೀರಪತ್ರಿಕೋದ್ಯಮಿ, ಕ್ರಾಂತಿಕಾರಿ ಸಾಧಕ.

ತಮ್ಮ ನಿರಂತರ ಪರಿಶ್ರಮ, ನಿಚ್ಚಳ ವಿವೇಕದಿಂದ ಕನ್ನಡಿಗರ ಹಿತಕಾದ ಆದರ್ಶ ವ್ಯಕ್ತಿ ಎಂಬುದನ್ನು ಮುನ್ನೆಲೆಗೆ ತಂದು ಚರ್ಚಿಸಿರುವ ಸೂರಿ ಪರ್ವ ಕೃತಿಯನ್ನು ಚರಿತ್ರೆಯ ಒಂದು ಭಾಗವಾಗಿ ಓದಿಕೊಳ್ಳಬೇಕು ಎಂಬುದಾಗಿ ಕೃತಿಯ ಕುರಿತು ಡಾ. ಜಿ. ಎನ್ ಉಪಾಧ್ಯ ಅವರ ಮುನ್ನುಡಿಯ ಅಭಿಪ್ರಾಯ ಸಮರ್ಥನೀಯವಾಗಿದೆ. "ಕರ್ಕಿ ವೆಂಕಟರಮಣ ಶಾಸ್ತ್ರಿಯವರ ಅಲ್ಪಾಯುಷ್ಯದ ಸಾಧನೆಯ ಬದುಕು ಒಂದು ದಂತಕಥೆ. ಎಲ್ಲರಿಗೂ ಮಾದರಿ. ಅವರ ನೆನಪನ್ನು ಇಂದಿನ ಮತ್ತು ಮುಂದಿನ ಪೀಳಿಗೆಯ ಜನರ ನಡುವೆ ಉಳಿಸುವ ಮಹತ್ಕಾರ್ಯವು ಈ ಕೃತಿಯ ಮೂಲಕ ಆಗಿದೆ"  ಎಂಬ ಹಿರಿಯ ಸಾಹಿತಿ ಎಲ್. ಎಸ್. ಶಾಸ್ತ್ರಿಯವರ ಹೇಳಿಕೆ ಬೆನ್ನುಡಿಯಲ್ಲಿ ಮೂಡಿರುವುದು ಕೃತಿಯ ವಿಶೇಷತೆಗೆ ಸಾಕ್ಷಿ. ಕೃತಿಕಾರರಾದ ಶಶಿಕಲಾ ಹೆಗಡೆಯವರು ಈ ಕೊಡುಗೆಗಾಗಿ ಅಭಿನಂದನಾರ್ಹರು.

# Some information which you might not know...

**Ayodhya Memories!!**
**A must-know post for every Hindu…**

Let's remember K.K.Nair, the hero who was responsible for us to get the land of Sri Rama in Ayodhya. Kandangalam Karunakaran Nair known as K.K.Nair was born on September 7, 1907 in a small village called Gutankadu, Alappuzha, Kerala.

Before India's independence, he went to England and at the age of 21, became a barrister and succeeded in the ICS examination before returning home.

He worked in Kerala for some time and was known for his honesty and bravery and earned a reputation as a servant of the people.

In 1945 he joined Uttar Pradesh state as a civil servant. He served in various posts and was appointed Deputy Commissioner and District Magistrate of Faizabad on June 1, 1949.

Following a complaint that the child Ram Vigraham was suddenly kept in Ayodhya the then Prime Minister Nehru ordered the state government to investigate and submit a report. The Chief Minister of the state, Govind Vallabh Pant, requested K.K.Nair to go there and make enquiries. Nair asked his subordinate, Shri Guru Dutt Singh, to investigate and submit a report.

Singh went there and presented a detailed report to KK Nair. His report said that Hindus worshiped Ayodya as the birthplace of Lord Rama (Ram Lalla). But the Muslims were creating problems claiming there was a mosque. His report reiterated that it was a Hindu temple. He suggested that a big temple should be built there. His report said that the government should allocate land for it and Muslims should be banned from going to that area.

Based on that report Nair issued orders prohibiting Muslims from going within a radius of 500 meters of the temple. (It is noteworthy that neither the government nor the court has been able to lift this ban till date).
Hearing this, Nehru fretted and fumed and got upset. He wanted the state government to order the immediate evacuation of the Hindus from the area and removal of the infant Ram Lalla. The Chief Minister Govind Vallabh Pant ordered Nair to immediately evacuate the Hindus and remove the idol of the infant Ram Lalla.

But Nair refused to implement the order. On the other hand, he issued another order stating that daily pooja should be performed to baby Rama. The order also said that the government should bear the cost for the pooja and the salary of the priest who performed pooja.

Terrified by this order, Nehru immediately ordered Nair's removal from service. When dismissed, Nair went to the Allahabad court and himself argued successfully against Nehru.

The court ordered that Nair should be reinstated and allowed to work in the same place. The court's order was like smearing Nehru's face with black ink. Hearing this order, the residents of Ayodhya urged Nair to contest in the elections.

But Nair pointed out that being a government servant he could not stand for elections. The residents of Ayodhya wanted Nair's wife to contest. Accepting the people's request, Mrs. Shakuntala Nair entered the fray as a candidate in Ayodhya during Uttar Pradesh's first Legislative Assembly elections.

At that time, the Congress candidates won all over the country. In Ayodhya alone, the Congress candidate who contested against Nair's wife lost by a margin of several thousands.

Mrs. Shakuntala Nair joined the Jana Sangh in 1952 and started developing the organisation.

A shocked Nehru and the Congress started pressurising Nair. He resigned from his post and started working as an advocate in the Allahabad High Court.

When the elections for the Parliament was announced in the year 1962, the people succeeded in persuading Nair and his wife to contest. They wanted him to speak about Ayodhya before Nehru. The people helped the Nair couple to win both Bahraich and Kaisarganj constituencies. It was a historic achievement.

And as a pleasant surprise, his driver was also elected as a member of the State Legislative Assembly from the Faisalabad constituency.

Later, the Indira regime imposed a state of emergency in the country and arrested the couple and imprisoned them. But their arrest caused a huge uproar in Ayodhya, and a scared government released them from jail.

The couple returned to Ayodhya and continued their public work. The BJP has always been winning both Assembly and Parliamentary elections from Ayodhya except for one or two times.

Nair was the first to deal with the Ayodhya case after independence. It was entirely handled by him. And even now, the anti-Hindu elements have not been able to change the orders issued by him as an officer.

On the basis of the order issued by Nair the pujas and the darshan of Ram Lalla continue even now.

In 1976, Mr. Nair wanted to return to his hometown. But the people would not allow him to go. However, Nair said goodbye to the people saying that he wanted to be in his hometown during his last days.

Nair surrendered to the lotus feet of Sri Ramachandra Murthy in his hometown on 7th September 1977. After hearing of his death, the residents of Ayodhya shed tears. A group went to Kerala to receive his ashes.

The ashes were received with great respect. They were taken in a decorated chariot and immersed in the Sarayu River near Ayodhya where Lord Rama bathed daily and worshipped the sun.

It is only because of Nair’s efforts that we are able to worship at Sri Rama Janma Bhoomi in Ayodhya. No wonder he is regarded as a divine person by the people of Ayodhya.

Would Rama's birthplace have come to us today if not for him? It is a question mark! May the glory of Shri K.K.Nair, who gave us the birthplace of Shri Rama today, ring loud too.

The Vishwa Hindu Parishad has bought land in his native village and erected a memorial for him. It may be noted that a Trust started in the name of K.K Nair provides scholarships and training to students appearing for the civil services examination.

# Few more strides before the centenary



✍ **M.A.N. Prasad**

**Association Along with Ganakala Parishath hosts the Music Conference of Young Artists**

Ganakala Parishath of Bangalore conducts Music Conference of Young Artist's every year in which apart from academic discussions and concerts they confer the title of "Ganakala Shri" to the chosen artiste. They wanted to hold this conference at Mumbai and approached us to join them as co-hosts. A large number of artists who are members of the organization would be attending the event.

We felt that if we were to host it in Mumbai, it should be relevant to the musicians in Mumbai. So, we contacted many music schools and music teachers in Mumbai and sought their suggestions. Many of them felt that the conference should focus on *Vaggeyakaras* of Mysore**.** Lecdems on their compositions would help the local students of music. We communicated the feedback we got from music schools to Ganakala Parishath and asked them to structure their programme accordingly. We approached all the music schools to enrol their teachers and students as delegates to the conference. Many of our members who are music lovers joined the conference as delegates.

The Conference was a two-day event, on 4$^{th}$ & 5$^{th}$ of Jan 2003. Over 60 artists from Bangalore and more than 200 delegates from Mumbai attended the conference. The Conference was inaugurated by Smt. Rani Satish, Minister for Kannada and Culture, Govt. of Karnataka. Eighteen teachers of Mumbai, who had put in years of training students in music, were honoured on this occasion.

An exhibition of rare photographs of various concerts was displayed at the conference. This exhibition was inaugurated by Shri. S. Sheshadri of Shanmukhananda Sabha who had served the field of classical arts for a long period.

Apart from concerts, there were lecdems on five eminent *Vaggeyakaras* of Mysore during the conference. The artist chosen for "Ganakala Shri" title was the young mridangam player, Vidwan Bangalore Praveen. Our president Shri.S.Doreswamy felicitated the artist on receiving this title.

The two-day conference was a grand success. It brought the artists and organzers of Mumbai and Bangalore closer. Leading Sabhas like Shanmkhananda and NCPA of Mumbai arranged concerts of many young artists from Bangalore. Similarly, many artists from Mumbai were invited for concerts at Bangalore. Our Association was recognized as a leading organization in the music circles.


**Golden Jubilee Endowment Lecture**

Since mid 80's, the Association along with the Department of Kannada of the Mumbai University have been conducting a series of lectures every year, under an endowment created by the Association during its Golden Jubilee. Many eminent Kannadigas, well known from various fields of arts, theatre, literature, science and philosophy have been the speakers in this series. On 18$^{th}$ & 19$^{th}$ of Jan 2003, under this lecture series, Prof. M.A.Lakshmithathachar of the Academy of Sanskrit Research of Melkote spoke on Vishshtadwaitha. The learned talk was well received and followed with an open house.




1. **Puzzle: What is unusual about the following words: revive, banana, grammar, voodoo, potato, dresser and uneven ?**
2. **Puzzle: Put a coin into an empty bottle and insert a cork into the neck. How can you remove the coin without removing the cork or breaking the bottle?**
3. **Puzzle: What 4 letter word can be written forward, backword or upside down and can still can be read from left to right?**

## LADDER




**ENGLISH WORDS**

**SYNONYMS**

| | | | |
|---|---|---|---|
| 1 | LOUD | = | NOISY (EXAMPLE) |
| 2 | QUIET | = | |
| 3 | TIRED | = | |
| 4 | PRETTY | = | |
| 5 | UGLY | = | |
| 6 | HONEST | = | |
| 7 | EVIL | = | |
| 8 | STRONG | = | |
| 9 | WEAK | = | |
| 10 | BRIGHT | = | |
| 11 | DARK | = | |
| 12 | CLEAVER | = | |
| 13 | FRIENDLY | = | |
| 14 | HUNGRY | = | |
| 15 | COMPETENT | = | |

**Hint: Ladder:**

Convert the word at the tops of the ladders to the words at the bottom, using the rungs in between.
On each rung, you must put a valid word that has the same letters as the word above it, apart from one or more letter change.There may be more than one way of achieving this.
**(Example:Laser, large...) (Example: Water, waste...)**

**Math Riddles:** A. Using only addition, add eight 8s to get the number 1,000.
B. What is the smallest number that increases by 12 when it is flipped and turned upside down?
C. What is 3/7 chicken, 2/3 cat and 2/4 goat?

---

**PUZZLES & TEASERS ANSWERS**

1. 9 (NINE) it said all but nine died
2. Shoe, Socks, Sandals, Sneakers, Slippers, Skis, Skates, Snow shoe, Stocking, Stilettos, & Stilts.
3. Period, Comma, Colon, Semi colon, Mark, Dash, Hyphen, Apostrophe, Parentheses, Question,Exclamation, Point, Quotation, Brackets & Ellipse.

**MIND STRETCHERS:** **Be, Bed, Debt, Debut, Busted, Dumbest, Stumbled**

**REBUS PUZZLE:** **Partly Cloude, Open and shut case, Jack in the box, Whats up with that, Play on words, Middle of the night, Back seat driver, Splitting headache, Multiple choice, No doubt about it, A shadow of a doubt, Two wrongs don't make a right, Three square meals, Without a second glance, Man for all seasons**

**A:** **They were Grandmother, Mother and Daughter.**

**B:** **(B.22)**

***Compiled by: Mr Ananth Banwasi***

# ಚಿಣ್ಣರ ಬಿಂಬಕ್ಕೆ ರಾಜ್ಯೋತ್ಸವ ಪುರಸ್ಕಾರ



**ಡಾ. ಜಿ. ಎನ್. ಉಪಾಧ್ಯ**

7000 ಮಕ್ಕಳಿಗೆ ಕನ್ನಡದ ದೀಕ್ಷೆ ನೀಡಿದ ಹಿರಿಮೆ, ಹಿರಿಯ ಪೊಲೀಸ್ ಅಧಿಕಾರಿ (ನಿ)ಪ್ರಕಾಶ ಭಂಡಾರಿ ಸಾಧನೆ:



ಕರ್ನಾಟಕದ ರಾಜಧಾನಿ ಬೆಂಗಳೂರನ್ನು ಬಿಟ್ಟರೆ ಅತಿ ಹೆಚ್ಚು ಕನ್ನಡಿಗರು ಇರುವ ಪ್ರದೇಶ ಮುಂಬೈ. ಈ ಮಹಾನಗರದಲ್ಲಿ ಇಂದಿಗೂ 18-20 ಲಕ್ಷ ತುಳು ಕನ್ನಡಿಗರು ನೆಲೆಸಿದ್ದು ತಮ್ಮ ಅಸ್ಮಿತೆಯನ್ನು ಕಾಪಿಟ್ಟು ಕೊಂಡು ಬರುತ್ತಿರುವುದು ಹೆಮ್ಮೆಯ ಸಂಗತಿ. ಮುಂಬೈ ಕನ್ನಡಿಗರ ಸಾಹಸ ಸಾಧನೆಗೆ ಹತ್ತಿರ ಹತ್ತಿರ ಎರಡು ಶತಮಾನಗಳ ಇತಿಹಾಸ ಇರುವುದು ಉಲ್ಲೇಖನೀಯ ಅಂಶ. ಮುಂಬೈ ಮಹಾನಗರದ ಬೆಳವಣಿಗೆಯಲ್ಲಿ ಕನ್ನಡಿಗರ ಕೊಡುಗೆಯೂ ಮಹತ್ವದ್ದಾಗಿದೆ. ಮುಂಬೈಯಲ್ಲಿ ಇರುವಷ್ಟು ಕನ್ನಡ ಸಂಘ ಸಂಸ್ಥೆಗಳು ಜಗತ್ತಿನ ಯಾವ ಮೂಲೆಯಲ್ಲೂ ಇಲ್ಲ ಎಂಬ ಪ್ರೊ. ಪುರುಷೋತ್ತಮ ಬಿಳಿಮಲೆ ಅವರ ಮಾತು ನಿಜವೇ ಆಗಿದೆ. ಮುಂಬೈಯಲ್ಲಿ ಇವತ್ತಿಗೂ ಪ್ರಾಥಮಿಕ ಶಾಲೆಯಿಂದ ಸ್ನಾತಕೋತ್ತರ ಅಧ್ಯಯನದ ವರೆಗೂ ಕನ್ನಡ ಮಾಧ್ಯಮದಲ್ಲಿ ಓದಲು ಅವಕಾಶವಿದೆ.

ಮುಂಬೈ ಮಹಾನಗರದಲ್ಲಿ ಕಳೆದ ಇಪ್ಪತ್ತು ವರ್ಷಗಳಲ್ಲಿ ಚಿಣ್ಣರ ಬಿಂಬ ಎಂಬ ಸಂಸ್ಥೆ ಮಾಡಿದ ಕನ್ನಡ ಕ್ರಾಂತಿ ಯಾರನ್ನೂ ಬೆರಗುಗೊಳಿಸದೆ ಬಿಡದು. ಕಲಾಜಗತ್ತು ಚಿಣ್ಣರ ಬಿಂಬ ಒಂದು ವಿಶಿಷ್ಟವಾದ ಸಂಸ್ಥೆ. ಇದು ಮಕ್ಕಳಿಂದ ಮಕ್ಕಳಿಗಾಗಿ ಮಕ್ಕಳೇ ನಡೆಸುವ ಒಂದು ಭಿನ್ನ ಬಗೆಯ ಗುರುಕುಲ. ಇದರ ರೂವಾರಿ ಮುಂಬೈನ ನಿವೃತ್ತ ಹಿರಿಯ ಪೊಲೀಸ್ ಅಧಿಕಾರಿ ಪ್ರಕಾಶ್ ಭಂಡಾರಿ. 2003 ರಲ್ಲಿ ಕೇವಲ ಐವತ್ತು ಮಕ್ಕಳಿಂದ ಆರಂಭವಾದ ಈ ಸಂಸ್ಥೆ ಇವತ್ತು ಸುಮಾರು ಏಳು ಸಾವಿರ ಮಕ್ಕಳಿರುವ ಬೃಹತ್ ಸಂಸ್ಥೆಯಾಗಿ ಬೆಳೆದು ಜಗದಗಲ ಹೆಸರು ಮಾಡಿದೆ.

ಮುಂಬೈ ಮಹಾನಗರದಲ್ಲಿ ಹುಟ್ಟಿ ಬೆಳೆದ ಕರ್ನಾಟಕ ಮೂಲದ ತುಳು ಕನ್ನಡಿಗರ ಮಕ್ಕಳು ತಮ್ಮ ಸಂಸ್ಕೃತಿ, ಪರಂಪರೆ, ಇತಿಹಾಸ, ಭಾಷೆ, ಸಂಸ್ಕಾರಗಳಿಂದ ದೂರವಾಗಿ ಅವರನ್ನು ಅನಾಥಪ್ರಜ್ಞೆ ಕಾಡಬಾರದೆಂಬ ಕಾರಣದಿಂದ ಮಕ್ಕಳ ಸರ್ವತೋಮುಖ ವಿಕಾಸದ ದೃಷ್ಟಿಯಿಂದ ಚಿಣ್ಣರ ಬಿಂಬವನ್ನು ಹುಟ್ಟುಹಾಕಲಾಯಿತು. ಈ ಮಹಾನಗರದ ಕನ್ನಡಿಗರ ಮಕ್ಕಳಲ್ಲಿ ಇರುವ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹ ನೀಡುವ, ಸೂಕ್ತ ವೇದಿಕೆ ಕಲ್ಪಿಸುವ, ಅವರಿಗೆ ಕರ್ನಾಟಕ ಸಂಸ್ಕೃತಿಯ ಹಿರಿಮೆ ಗರಿಮೆಯನ್ನು ತಿಳಿಸಿ ಕೊಡುವ, ಮಕ್ಕಳ ಮನೋವಿಕಾಸಕ್ಕೆ ಪೂರಕವಾದ ವಾತಾವರಣವನ್ನು ಸೃಷ್ಟಿಸುವ, ಅವರಲ್ಲಿ ಆತ್ಮವಿಶ್ವಾಸ ಮೂಡಿಸುವ ಕೆಲಸದಲ್ಲಿ ಚಿಣ್ಣರಬಿಂಬ ಯಶಸ್ವಿಯಾಗಿದೆ. ಇಂದು ಚಿಣ್ಣರಬಿಂಬ ಮಹಾರಾಷ್ಟ್ರದಲ್ಲಿ ಮನೆಮಾತಾಗಿದೆ.

ಚಿಣ್ಣರಬಿಂಬದಲ್ಲಿ 8ರಿಂದ 14ವರ್ಷದೊಳಗಿನ ಕರ್ನಾಟಕ ಮೂಲದ ಮಕ್ಕಳು ಯಾವುದೇ ತಾರತಮ್ಯ ವಿಲ್ಲದೆ ಉಚಿತವಾಗಿ ಪ್ರವೇಶ ಪಡೆಯಬಹುದು. ನಮ್ಮ ನಾಡು ನುಡಿ, ಸಂಸ್ಕೃತಿಯ ವೈಭವವನ್ನು ತಿಳಿಯ ಪಡಿಸಲು ಭಜನೆ, ಯಕ್ಷಗಾನ, ನೃತ್ಯ, ಸಂಗೀತ, ಕಲೆ, ರಂಗೋಲಿ, ಜಾನಪದ ಕ್ರೀಡೆ, ನಾಟಕ, ಕನ್ನಡ ಕಲಿಕೆ ಹೀಗೆ ಪ್ರತಿಭೆಯ ವಿಕಸನಕ್ಕೆ ಏನೆಲ್ಲ ಬೇಕೋ ಆ ಕುರಿತಾದ ತರಬೇತಿಯನ್ನು ಆಯಾ ಕ್ಷೇತ್ರದ ತಜ್ಞರಿಂದ ನೀಡಲಾಗುತ್ತದೆ. ಮಕ್ಕಳಲ್ಲಿ ಸಮತೆ ಮಮತೆಯನ್ನು ಬೆಳೆಸುವ ಸಹಕಾರ ಪ್ರವೃತ್ತಿಯನ್ನು ಹೆಚ್ಚಿಸುವ ಕಡೆಗೂ ಇಲ್ಲಿ ಆದ್ಯತೆ ಕೊಡಲಾಗುತ್ತದೆ. ಇವತ್ತಿನ ಶಾಲಾ ಶಿಕ್ಷಣದಲ್ಲಿ ಸಿಗದ ಬದುಕಿನ ಯಶಸ್ಸಿಗೆ ಬೇಕಾದ ಒಳಗುಟ್ಟನ್ನು ಇಲ್ಲಿ ಮಕ್ಕಳು ಪಡೆಯುತ್ತಿರುವುದು ವಿಶೇಷ. ಮುಂಬೈ ನಗರವಲ್ಲದೆ ಥಾಣೆ, ರಾಯಗಡ ವ್ಯಾಪ್ತಿಯಲ್ಲಿ ಇಂದು ಚಿಣ್ಣರ ಬಿಂಬದ ಮೂವತ್ತು ಶಾಖೆಗಳು ಸಕ್ರಿಯವಾಗಿ ಕೆಲಸ ಮಾಡುತ್ತಿವೆ. ಪ್ರತಿ ಭಾನುವಾರ ಅತ್ಯಂತ ಶಿಸ್ತಿನ ತರಬೇತಿ ಶಿಬಿರಗಳನ್ನು ನಡೆಸಿಕೊಂಡು ಬರಲಾಗುತ್ತಿದೆ. ಈ ಸಾಂಸ್ಕೃತಿಕ ಪರಿಚಾರಿಕೆಯಲ್ಲಿ ನೂರಾರು ಮಂದಿ ಕನ್ನಡಿಗರು ಸ್ವಯಂ ಸೇವಕರಾಗಿ ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಕೆಲಸ ಮಾಡುತ್ತಿದ್ದಾರೆ. ಮೂವತ್ತಕ್ಕೂ ಹೆಚ್ಚು ಶಿಕ್ಷಕರು ಕನ್ನಡ ಕಲಿಸುವ ಕೆಲಸದಲ್ಲಿ ಪ್ರೀತಿಯಿಂದ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಮುಂಬೈಯಲ್ಲಿ ಸುಸಂಸ್ಕೃತ ತಲೆಮಾರನ್ನು ರೂಪಿಸುವ ಕಾಯಕದಲ್ಲಿ ಅವರು ಮಗ್ನರಾಗಿದ್ದಾರೆ. ಇದು ರಾಷ್ಟವನ್ನು ಕಟ್ಟುವ ಕೆಲಸ ಎಂದರೆ ತಪ್ಪಾಗದು. ಸುಮಾರು ಏಳು ಸಾವಿರ ಮಕ್ಕಳು ಇಲ್ಲಿ ನೋಂದಣಿ ಮಾಡಿಕೊಂಡಿದ್ದಾರೆ. ಕಳೆದ ಹತ್ತಾರು ವರ್ಷಗಳಲ್ಲಿ ಚಿಣ್ಣರ ಬಿಂಬದ ಮೂಲಕ ಸಹಸ್ರ ಸಹಸ್ರ ಮಕ್ಕಳು ಕನ್ನಡ ಕಲಿತು ಸೈ ಎನಿಸಿಕೊಂಡಿದ್ದಾರೆ. ಅವರು ಈಗ ಕನ್ನಡದ ಸಂಸ್ಕೃತಿಯ ರಾಯಭಾರಿಯಾಗಿದ್ದಾರೆ. ಮುಂಬೈಯಲ್ಲಿ

ಕನ್ನಡವನ್ನು ಮುನ್ನಡೆಸುವ ಜವಾಬ್ದಾರಿ ಹೊರಲು ಅವರು ತಯಾರಾಗುತ್ತಿದ್ದಾರೆ. ಪಾಲಕರಿಗೂ ತಮ್ಮ ಮಕ್ಕಳು ಸರಿಯಾದ ಮಾರ್ಗದಲ್ಲಿ ಹೆಜ್ಜೆಹಾಕುತ್ತಿದ್ದಾರೆ ಎಂಬ ಹೆಮ್ಮೆಯೂ ಇದೆ. ಹತ್ತಾರು ಸಾವಿರ ಪಾಲಕರು ಈ ಸಂಸ್ಥೆಯ ಬೆಂಬಲಕ್ಕೆ ನಿಂತಿದ್ದಾರೆ. ಹೀಗಾಗಿ ಚಿಣ್ಣರ ಬಿಂಬ ಒಂದು ಬ್ರಹತ್ ಕೂಡುಕುಟುಂಬದಂತೆ ಕಂಡರೆ ಅಚ್ಚರಿ ಪಡಬೇಕಾಗಿಲ್ಲ.



ಚಿಣ್ಣರ ಬಿಂಬ ಒಂದು ಬಾಲ ವಿಕಾಸ ಅಕಾಡೆಮಿಯಂತೆ ಕೆಲಸ ಮಾಡಿದೆ, ಮಾಡುತ್ತಿದೆ. ಒಂದು ವಿಶ್ವವಿದ್ಯಾಲಯ, ಒಂದು ಅಕಾಡೆಮಿ ಮಾಡಬಹುದಾದ ಕೆಲಸವನ್ನು ಈ ಸಂಸ್ಥೆ ಮಾಡುತ್ತಾ ಬಂದಿರುವುದು ಸಾಮಾನ್ಯದ ಸಂಗತಿಯಲ್ಲ.ಇಲ್ಲಿ ತರಬೇತಿ ಪಡೆದ ಮಕ್ಕಳು ಇಂದು ನಾಡಿನೆಲ್ಲೆಡೆ ವಿವಿಧ ಕ್ಷೇತ್ರಗಳಲ್ಲಿ ಮಿಂಚುತ್ತಿದ್ದಾರೆ. ಅನೇಕರು ಕಲಾವಿದರಾಗಿ ಹೊರಹೊಮ್ಮಿದ್ದಾರೆ. ಚಿಣ್ಣರ ಬಿಂಬ ತನ್ನ ವಿಶಿಷ್ಟ ಸಾಂಸ್ಕೃತಿಕ ಚಟುವಟಿಕೆಗಳಿಂದ ಇಂದು ದೇಶ ವಿದೇಶಗಳಲ್ಲಿ ಹೆಸರುಮಾಡಿದೆ. ಮಕ್ಕಳಿಗೆ ಯೋಗ್ಯ ತರಬೇತಿ ಸಿಕ್ಕರೆ ಈ ಎಳೆಯರು ಯಾವ ಎತ್ತರಕ್ಕೆ ಏರಬಲ್ಲರು ಎಂಬುದಕ್ಕೆ ಚಿಣ್ಣರ ಬಿಂಬವೇ ಸಾಕ್ಷಿ. ಇಂಥ ಒಂದು ವಿಶಿಷ್ಟ ಸಂಸ್ಥೆಯನ್ನು ನಾವಂತೂ ಕಂಡಿಲ್ಲ ಎಂಬುದಾಗಿ ವೀರೇಂದ್ರ ಹೆಗಡೆ, ವಿಶ್ವೇಶ್ವರ ತೀರ್ಥ ಸ್ವಾಮೀಜಿ, ಉಮಾಶ್ರೀ, ಎಸ್. ಎಂ. ಕೃಷ್ಣ, ಯಡಿಯೂರಪ್ಪ, ಡಿ. ಕೆ. ಶಿವಕುಮಾರ್, ಸಂಧ್ಯಾ ಪೈ, ಸಿದ್ದರಾಮಯ್ಯ, ಗೋಪಾಲ ಶೆಟ್ಟಿ, ಬಿ. ಆರ್. ಶೆಟ್ಟಿ, ಐಕಳ ಹರೀಶ್ ಶೆಟ್ಟಿ, ರವಿ ಕಿರಣ್, ಸುನೀಲ್ ಶೆಟ್ಟಿ, ಮೊದಲಾದವರು ಮುಕ್ತ ಕಂಠದಿಂದ ಕೊಂಡಾಡಿದ್ದಾರೆ. ಕರ್ನಾಟಕದ ಮುಖ್ಯಮಂತ್ರಿಗಳು, ನೂರಾರು ಮಂದಿ ಶಾಸಕರು, ಸಿನಿಮಾ ಕಲಾವಿದರು, ಪತ್ರಕರ್ತರು, ಸಾಧಕರು ಚಿಣ್ಣರ ಬಿಂಬದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಇಲ್ಲಿನ ಮಕ್ಕಳ ಅಸಾಧಾರಣ ಪ್ರತಿಭೆಯನ್ನು ಕಂಡು ಮೂಕ ವಿಸ್ಮಿತರಾಗಿದ್ದಾರೆ.

ಮುಂಬೈ ಮಹಾನಗರದಲ್ಲಿ ಚಿಣ್ಣರ ಬಿಂಬವನ್ನು ಕಟ್ಟಿ ಬೆಳೆಸಿದ ಕೀರ್ತಿ ನಿವೃತ್ತ ಹಿರಿಯ ಪೊಲೀಸ್ ಅಧಿಕಾರಿ, ಮಹಾನ್ ಸಂಘಟಕ ಪ್ರಕಾಶ ಭಂಡಾರಿ ಅವರಿಗೆ ಸಲ್ಲುತ್ತದೆ. ಅವರು ಅದರ ರೂವಾರಿ, ಕುಲಪತಿ. ಮಹಾರಾಷ್ಟ್ರ ಪೊಲೀಸ್ ಇಲಾಖೆಯಲ್ಲಿ ಡೆಪ್ಯುಟಿ ಪೊಲೀಸ್ ಕಮಿಷನರ್ ಆಗಿ ಕೆಲಸ ಮಾಡುತ್ತಲೇ ಅವರು ಈ ಸಂಸ್ಥೆಯನ್ನು ಬೆಳೆಸಿದ ಪರಿ ನಾಡಿಗೆ ಮಾದರಿಯಾಗಿದೆ. ಅವರ ಪತ್ನಿ ರೇಣುಕಾ ಭಂಡಾರಿ ಅವರ ತ್ಯಾಗವನ್ನು ವರ್ಣಿಸಲು ಸಾಧ್ಯವಿಲ್ಲ. ಪ್ರಕಾಶ ಭಂಡಾರಿ ಅವರ ಇಬ್ಬರು ಮಕ್ಕಳು ಪೂಜಾ ಮತ್ತು ನಯನಾ ಇದರ ಬೆನ್ನೆಲುಬು.ಅವರ ಇಡೀ ಕುಟುಂಬ ಮುಂಬೈನ ಸಾವಿರಾರು ಮಕ್ಕಳ ಬಾಳಿಗೆ ಬೆಳಕಾಗಿರುವುದು ಗಮನೀಯ ಸಂಗತಿ. ಪ್ರಕಾಶ್ ಭಂಡಾರಿ ಅವರ ಮನೆ ಮಾತು ತುಳು. ಅವರು ಉತ್ಕಟ ಕನ್ನಡದ ಅಭಿಮಾನಿ. ಕನ್ನಡ, ಹಿಂದಿ ರಂಗಭೂಮಿಯಲ್ಲಿ ಅವರು ಮಿಂಚಿದವರು. ಅವರು ಪೊಲೀಸ್ ಇಲಾಖೆಯಲ್ಲಿ ದಕ್ಷ ಅಧಿಕಾರಿಯಾಗಿ ದುಷ್ಟ ಶಕ್ತಿಗಳನ್ನು ಮಟ್ಟ ಹಾಕಿದವರು. ಮುಂಬೈಯಲ್ಲಿ ಹೊಸ ತಲೆಮಾರನ್ನು ರೂಪಿಸಿದ ಶ್ರೇಯಸ್ಸು ಅವರಿಗೆ ಸಲ್ಲುತ್ತದೆ. ಕನ್ನಡಕ್ಕಾಗಿ ಮಾಡುವ ಕೆಲಸ ಬರಿಯ ಕನ್ನಡದ ಕೆಲಸವಲ್ಲ, ನಾಡಿನ ಕೆಲಸ. ನಾಡಿನ ಕೆಲಸ ಲೋಕದ ಕೆಲಸವೂ ಹೌದು ಎಂಬ ವಿನೀತ ಭಾವ ಅವರದು. ಇಂತವರ ಸಂತತಿ ಸಾವಿರವಾಗಲಿ ಎಂದು ಹಾರೈಸುವೆ. ಈ ಸಂಸ್ಥೆಯ ಏಳಿಗೆಗಾಗಿ ಶ್ರಮಿಸಿದ ಕಲಾವಿದ ವಿಜಯಕುಮಾರ್ ಶೆಟ್ಟಿ, ಸುರೇಂದ್ರಕುಮಾರ್ ಹೆಗಡೆ, ಸತೀಶ್ ಸಾಲಿಯಾನ್, ಗೀತಾ ಹೆರಳೆ ರಮೇಶ್ ರೈ, ಮೊದಲಾದವರ ಶ್ರಮ ಸಾರ್ಥಕ. ಚಿಣ್ಣರ ಬಿಂಬದ ಕನ್ನಡ ಕೈಂಕರ್ಯಕ್ಕೆ ಕರ್ನಾಟಕ ಸರಕಾರ ಈ ಬಾರಿ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿರುವುದು ಅಭಿಮಾನದ ಸಂಗತಿ.ಚಿಣ್ಣರ ಬಿಂಬದ ರೂವಾರಿ ಪ್ರಕಾಶ್ ಭಂಡಾರಿ ಅವರಿಗೆ ಕನ್ನಡಿಗರು ಎಂದಿಗೂ ಕೃತಜ್ಞರು. ಮುಂಬೈಯಲ್ಲಿ ಕನ್ನಡವನ್ನು ಬಲಗೊಳಿಸಿದ ಅವರಿಗೆ ನಮ್ಮದೊಂದು ಸಲಾಮ್.

## ಅಸೋಸಿಯೇಷನ್‌ನಲ್ಲಿ ಮುಂಬರುವ ಕಾರ್ಯಕ್ರಮಗಳು

**ಕನ್ನಡ ರಾಜ್ಯೋತ್ಸವ ಮತ್ತು ಕನಕದಾಸ ಜಯಂತಿಯ ಪ್ರಯುಕ್ತ**

**ಶನಿವಾರ, ನವೆಂಬರ್ 25, 2023 ಸಂಜೆ 5.30ಕ್ಕೆ**

**ಸೀನಿಯರ್ ವಿಭಾಗದ ವಿಜೇತರಿಂದ ಹಾಡುಗಾರಿಕೆ**

**ಹಾಗೂ**

**ಸಂಗೀತ ಸ್ಪರ್ಧೆಯಲ್ಲಿ ಗೆದ್ದವರಿಗೆ ಬಹುಮಾನ ವಿತರಣೆ**

# ಅಸೋಸಿಯೇಷನ್‌ನಲ್ಲಿ ಶಾರದಾ ಪೂಜೆ ಹಾಗೂ ಕೋಲಾಟ


**“ಹಬ್ಬಗಳೊಳೆಲ್ಲ ದಸರೆಯ ಹಬ್ಬ
ಕಬ್ಬದೊಳೆಲ್ಲ ರನ್ನನ ಕಬ್ಬ”**




ಕಬ್ಬ ಅಂದರೆ ಕಾವ್ಯ. ಕಾವ್ಯದಲ್ಲೆಲ್ಲ ರನ್ನನ ಕಾವ್ಯವು ಹೇಗೆ ಶ್ರೇಷ್ಠವೋ ಹಾಗೆಯೇ ಹಬ್ಬಗಳಲ್ಲಿ ದಸರಾ ಹಬ್ಬ ಬಹು ಶ್ರೇಷ್ಠ. ಅದರಲ್ಲೂ ಮೈಸೂರು ಹಬ್ಬ ಜಗತ್ಪ್ರಸಿದ್ಧ. ಇಂತಹ ಜಗತ್ಪ್ರಸಿದ್ಧವಾದ ದಸರಾವನ್ನು ನಮ್ಮ ಮೈಸೂರು ಅಸೋಸಿಯೇಷನ್‌ನಲ್ಲಿ ಆಚರಿಸಿದೆವು. ಅಕ್ಟೋಬರ್ 22, 2023ರ ಶನಿವಾರದಂದು ಸದಸ್ಯರೆಲ್ಲರೂ ಸೇರಿ ಶಾರದಾ ಪೂಜೆಯ ಮೂಲಕ ಆಚರಿಸಿದೆವು. ಶ್ರೀ ಮಂಜುನಾಥಯ್ಯನವರ ನೇತೃತ್ವದಲ್ಲಿ ಶ್ರೀ ಶಶಿಕಾಂತ್ ಜೋಷಿಯವರು ದೇವಿಗೆ ಪೂಜೆಯನ್ನು ಸಲ್ಲಿಸಿದರು. ಅಲಂಕೃತವಾದ ಮಂಟಪದಲ್ಲಿ ಶಾರದಾಂಬೆಯನ್ನು ಶೃಂಗರಿಸಿ ವಿವಿಧ ಪುಷ್ಪಗಳಿಂದ ಪೂಜಿಸಿದ ನಂತರ ಮಹಿಳೆಯರೆಲ್ಲರೂ ದೇವಿಗೆ ಆರತಿ ಬೆಳಗಿದರು. ಅಧ್ಯಕ್ಷೆ ಶ್ರೀಮತಿ ಕಮಲ ಅವರು ಉಪಸ್ಥಿತರಿದ್ದರು. ನಂತರ ಶ್ರೀಮತಿ ರಮಾ ವಸಂತ್ ಅವರು ದಸರೆಯ ವಿಶೇಷ, ಆಚರಣೆ, ವಿವಿಧ ಪ್ರಾಂತ್ಯಗಳಲ್ಲಿ ದುರ್ಗಾ ಪೂಜೆಯ ಬಗ್ಗೆ ಮಾತನಾಡಿದರು. ನಂತರದಲ್ಲಿ ಡಾ। ಮಂಜುನಾಥ್ ಅವರು ದುರ್ಗಾಪೂಜೆಯ ಜೊತೆಗೆ ಅಣ್ಣಮ್ಮ ಪೂಜೆಯ ಮಹತ್ವವನ್ನು ತಿಳಿಸಿದರು. ನಂತರ ದೇವಿಗೆ ವಿಶೇಷ ಸೇವೆಯಾದ ಕೋಲಾಟವನ್ನು ನಮ್ಮ ಸದಸ್ಯ, ಸದಸ್ಯೆಯರೆಲ್ಲ ಸೇರಿ ಆಡಿ ಬಹಳ ಸಂತೋಷಪಟ್ಟರು. ಕೋಲಾಟದ ಕಾರ್ಯಕ್ರಮ ನಮ್ಮ ಆಡಿಟೋರಿಯಂನಲ್ಲಿ ನಡೆಯಿತು. ನಂತರ ಪ್ರೀತಿ ಭೋಜನವನ್ನು ಮಾಡಿ ಎಲ್ಲರೂ ಉಲ್ಲಾಸದಿಂದ ಮನೆಗಳಿಗೆ ತೆರಳಿದರು.

ವರದಿ : **ಶ್ರೀಮತಿ ರಮಾ ವಸಂತ್**






Edited by Dr. Jyothi Satish, Printed & Published by Hon. Secretary, The Mysore Association Bombay, Mumbai - 400019. Tel: 2403 7065
Email : mysoreassociation.mumbai@gmail.com Website: www.mysoreassociation.in Printed by Aarati Art Printers, Fort, Mumbai - 1 Mob.: 98201 60077